ಅಖಿಲ ಕರ್ನಾಟಕ

# ಶಿಕ್ಷಕ ಸಮಾಚಾರ

ಫೆಬ್ರವರಿ 2015 ಮಾಸ ಪತ್ರಿಕೆ

ಸಂಪುಟ : 37
ಸಂಚಿಕೆ : 5
ಪುಟ : 16
ಬೆಲೆ : ₹ 5/-



## ಪರೀಕ್ಷೆ ? ಪರೀಕ್ಷೆ ? ಪರೀಕ್ಷೆ ಹೇಗೋ? ಏನೋ ?

ಈ ಭಯ ವಿದ್ಯಾರ್ಥಿಗಳಲ್ಲಿ, ಪೋಷಕರಲ್ಲಿ ಆತಂಕ.
ಈ ಭಯ ನಿವಾರಿಸಿ ಹೇಗೆ ವಿದ್ಯಾರ್ಥಿಗಳು
ಪರೀಕ್ಷೆಗೆ ತಯಾರಿ ಮಾಡಿಕೊಳ್ಳಬೇಕು ಎಂಬ ಕಾಳಜಿ ನಮ್ಮದು.
ಅದಕ್ಕಾಗಿ ಈ ಪರೀಕ್ಷಾ ವಿಶೇಷ ಸಂಚಿಕೆ ನಿಮ್ಮ ಕೈಗೆ.

A Journal of Karnataka State Secondary Teachers' Association

# ಸಂಪಾದಕೀಯ

ಫೆಬ್ರವರಿ, ಮಾರ್ಚ್ ಬಂದರೆ ಪರೀಕ್ಷೆಗಳ ಪರ್ವಕಾಲ. ವಿದ್ಯಾರ್ಥಿಗಳಿಗೆ, ಪೋಷಕರಿಗೆ ಅತ್ಯಂತ ಮಹತ್ವದ ದಿನಗಳು.

ತರಗತಿ ಪರೀಕ್ಷೆಗಳಿಂದ ಹಿಡಿದು ಎಸ್.ಎಸ್.ಎಲ್.ಸಿ., ಪಿ.ಯು.ಸಿ.,ಯ ನಿರ್ಣಾಯಕ ಪರೀಕ್ಷೆಗಳು ನಡೆಯುತ್ತವೆ. ಎಲ್ಲಾ ಪರೀಕ್ಷೆಗಳಿಗೂ ಅದರದೇ ಅದ ಮಹತ್ವವಿರುತ್ತದೆ. ಈ ವರ್ಷ ಎಸ್.ಎಸ್.ಎಲ್.ಸಿ. ಪರೀಕ್ಷೆಯನ್ನು ನೂತನ ಪಠ್ಯಕ್ರಮ, ನೂತನ ಪರೀಕ್ಷಾ ಪದ್ಧತಿಯೊಂದಿಗೆ ವಿದ್ಯಾರ್ಥಿಗಳು ಎದುರಿಸಬೇಕಾಗಿದೆ. ಎಲ್ಲಾ ವಿದ್ಯಾರ್ಥಿಗಳೂ ಈ ಸವಾಲನ್ನು ಸಮರ್ಥವಾಗಿ ಎದುರಿಸುತ್ತಾರೆಂಬ ವಿಶ್ವಾಸ ಶಿಕ್ಷಕ ಸಮೂಹದ್ದು. ವಿದ್ಯಾರ್ಥಿಗಳಿಗೆ ನೆರವಾಗಲೆಂದು ಈ ಸಂಚಿಕೆಯನ್ನು ಪರೀಕ್ಷಾ ಸಂಚಿಕೆಯಾಗಿ ರೂಪಿಸಲಾಗಿದೆ.

ದೇಶಕ್ಕಾಗಿ ಬಲಿದಾನ ಮಾಡಿ ಅಮರರಾದ ಮಹನೀಯರು ಭಾರತದಲ್ಲಿ ಅನೇಕರು. ಅಂತಹವರಲ್ಲಿ ಸಾವರ್ಕರ್ ಹಾಗೂ ಚಂದ್ರಶೇಖರ ಆಜಾದ್‌ರ ಹೆಸರು ಅಜರಾಮರ. ಈ ತಿಂಗಳ 26 ಸಾವರ್ಕರ್ ಸ್ಮೃತಿದಿನವಾದರೆ, 27 ಆಜಾದ್‌ರ ಬಲಿದಾನದ ದಿನ. ಫೆಬ್ರವರಿ 17 ರಂದು ಪ್ರಪ್ರಥಮ ಕ್ರಾಂತಿಕಾರಿ ವಾಸುದೇವ ಬಲವಂತ ಫಡಕೆ ಜನ್ಮದಿನ. ಈ ಸಂದರ್ಭದಲ್ಲಿ ಈ ಮೂವರೂ ಮಹನೀಯರನ್ನು ಸ್ಮರಿಸುತ್ತಾ, ವಿದ್ಯಾಥಿಗಳಿಗೆ ಅವರ ದೇಶಪ್ರೇಮವನ್ನು ಪರಿಚಯಿಸೋಣ. ನಾವು ಸ್ಮರಿಸಬೇಕಾದ ಮತ್ತೊಬ್ಬ ಆದರ್ಶ ಗುರು ಶ್ರೀರಾಮಕೃಷ್ಣ ಪರಮಹಂಸರು. ಸ್ವಾಮಿ ವಿವೇಕಾನಂದರಂತಹ ಜಗದ್ವಂದ್ಯರನ್ನು ರೂಪಿಸಿದವರು ಪರಮಹಂಸರು. ಶ್ರೀರಾಮಕೃಷ್ಣರ ಜಯಂತಿ ಫೆಬ್ರವರಿ 20ರಂದು. ಶ್ರೀ ರಾಮಕೃಷ್ಣರಿಗೆ ನಮ್ಮ ಭಕ್ತಿ ಪೂರ್ವಕ ನಮನಗಳು.

ಭಾಷೆ ವ್ಯಕ್ತಿಯ ಜೀವನದಲ್ಲಿ ಅತ್ಯಂತ ಪ್ರಮುಖ ಪಾತ್ರ ವಹಿಸುತ್ತದೆ. ಅದರಲ್ಲೂ ಮಾತೃಭಾಷೆಗೆ ಇನ್ನೂ ಹೆಚ್ಚಿನ ಮಹತ್ವ. ಶಿಕ್ಷಣ ಮಾಧ್ಯಮ ಮಾತೃಭಾಷೆಯಲ್ಲಿರಬೇಕಾದುದು ಸಹಜ. ಆದರೆ ನಮ್ಮ ರಾಜ್ಯದಲ್ಲಿ ಮಾತೃಭಾಷಾ ಶಿಕ್ಷಣದ ಬಗ್ಗೆ ಅನೇಕ ಸಮಸ್ಯೆಗಳು. ಶಿಕ್ಷಣ ಮಾಧ್ಯಮ ಮಾತೃಭಾಷೆಯಾಗುವುದರಲ್ಲಿ ಸರ್ಕಾರ, ಕಾನೂನು, ಕೋರ್ಟ್‌ಗಳಿಗಿಂತ ಜನ ಮನಸ್ಸು ಮಾಡಬೇಕು. ತಂದೆ ತಾಯಿಗಳು ಮಕ್ಕಳಿಗೆ ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ಕೊಡಿಸಿದರೆ ಯಾವ ತೊಡಕುಗಳೂ ಬರುವುದಿಲ್ಲ. ಆ ದಿನಗಳು ಬೇಗ ಬರಲಿ ಎಂದು ಅಂತರರಾಷ್ಟ್ರೀಯ ಮಾತೃಭಾಷಾ ದಿನದ ಸಂದರ್ಭದಲ್ಲಿ (ಫೆಬ್ರವರಿ 21) ಆಶಿಸೋಣ.

ಮಾರ್ಚ್ 8 ಅಂತರರಾಷ್ಟ್ರೀಯ ಮಹಿಳಾ ದಿನ. ವೇದಗಳ ಕಾಲದಿಂದಲೂ ಸ್ತ್ರೀಯರ ಸಾಧನೆ ಗಮನಾರ್ಹವಾದುದು. ಈಗಂತೂ ಎಲ್ಲ ಕ್ಷೇತ್ರಗಳಲ್ಲೂ ಮಹಿಳೆಯರು ಮಿಂಚುತ್ತಿದ್ದಾರೆ. ರಾಷ್ಟ್ರಕವಿ ಡಾ॥ ಜಿ. ಎಸ್. ಶಿವರುದ್ರಪ್ಪನವರು ಮಹಿಳೆಯು ನಿರ್ವಹಿಸುವ ಜವಾಬ್ದಾರಿಗಳನ್ನು ಮೆಚ್ಚಿ ಒಂದೇ ಅಕ್ಷರದಲ್ಲಿ 'ಸ್ತ್ರೀ ಎಂದರೆ ಅಷ್ಟೇ ಸಾಕೇ' ಎಂದು ಮೂಕ ವಿಸ್ಮಿತರಾಗಿದ್ದಾರೆ. ಶಬ್ದಕ್ಕೆ ಮೀರಿದ ಭಾವನೆ. ಅಂತರರಾಷ್ಟ್ರೀಯ ಮಹಿಳಾ ದಿನದ ಆಚರಣೆಯ ಸಂದರ್ಭದಲ್ಲಿ ಎಲ್ಲಾ ಸಹೋದರಿಯರಿಗೂ ಶುಭಾಶಯಗಳು.

ಸಂಪಾದಕರು

# ಸುಭಾಷಿತ

ಯುಕ್ತ ಹಾಗೂ ಅಯುಕ್ತವಾದುದನ್ನು ವಿಮರ್ಶೆ ಮಾಡಿ ಬುದ್ಧಿವಂತಿಕೆಯಿಂದ ಕಾರ್ಯವನ್ನು ಸಾಧಿಸಿ ಜೀವನ ನಿರ್ವಹಣೆ ಮಾಡುವವನು ಉತ್ತಮ ಎನಿಸಿದರೆ, ಭುಜಬಲಪರಾಕ್ರಮಗಳಿಂದ ತನ್ನ ಕೆಲಸವನ್ನು ಸಾಧಿಸುವವನು ಮಧ್ಯಮ ಎನಿಸಿಕೊಳ್ಳುತ್ತಾನೆ. ಯಾವ ಬುದ್ಧಿವಂತಿಕೆಯನ್ನೂ ಬಳಸದೆ ಕೇವಲ ಅಲ್ಪಕಾರ್ಯಗಳನ್ನು ಮಾಡುತ್ತಾ ಆಯಾ ದಿನದ ಆಹಾರವನ್ನು ಸಂಪಾದಿಸುವವನು ಅಧಮ ಎಂದೆನಿಸುತ್ತಾನೆ.

- ಕೇಶಿನೀ- ವಿರೋಚನ ಕಥಾ

# ಪರಿವಿಡಿ


- ಪರೀಕ್ಷೆ – ಪೂರ್ವ ಸಿದ್ಧತೆಗಳು 3
- ಪರೀಕ್ಷೆ– ಸಿದ್ಧತೆಯ ಸೂತ್ರ 4
- ಸ್ಫೂರ್ತಿಯ ಸೆಲೆ–ಮೇಡಂ ಕ್ಯೂರಿ 8
- ವಾಸುದೇವ ಬಲವಂತ ಫಡಕೆ 10
- ಸಂಘದ ವಾರ್ತೆ 11
- ಸಾಧಕರನ್ನು ಸ್ಮರಿಸೋಣ 15

# ಪರೀಕ್ಷೆ – ಪೂರ್ವ ಸಿದ್ಧತೆಗಳು

**ಆರ್. ಎಸ್. ರಾಜಗೋಪಾಲ್**
**ಪೂರ್ವಾಧ್ಯಕ್ಷರು, ಬೆಂಗಳೂರು ದಕ್ಷಿಣ ಜಿಲ್ಲೆ**

ಡಿಸೆಂಬರ್ ತಿಂಗಳು ಬಂದಿತೆಂದರೆ ವಿದ್ಯಾರ್ಥಿಗಳಲ್ಲಿ, ಪೋಷಕರಲ್ಲಿ ಒತ್ತಡ, ಉದ್ವೇಗ... ಏರ್ಪಡುವುದು ಸಹಜ. ಒಟ್ಟಾರೆ ಪರೀಕ್ಷೆ ಹತ್ತಿರ ಬರುವುದರಿಂದ ಇವರಲ್ಲಿ ಭಯ ಸಹಜವಾಗಿ ಮೂಡುವುದೆಂದರ್ಥ. ಈ ಮಾನಸಿಕ ದುಗುಡ ಎಲ್ಲಾ ವಿದ್ಯಾರ್ಥಿಗಳಲ್ಲಾಗಲೀ, ಎಲ್ಲ ಪೋಷಕ ವರ್ಗದವರಲ್ಲಾಗಲೀ ಉಂಟಾಗುವುದಿಲ್ಲ. ಯಾವ ವಿದ್ಯಾರ್ಥಿ ಶಾಲೆ ಆರಂಭವಾದ ದಿನದಿಂದಲೇ ಒಂದು ರೀತಿ ಪೂರ್ವನಿಯೋಜಿತ ವೇಳಾಪಟ್ಟಿಯಂತೆ ವ್ಯಾಸಂಗ ಮಾಡಿಕೊಂಡು ಬಂದಿರುತ್ತಾನೋ ಅವನಿಗೆ/ ಅವಳಿಗೆ ಯಾವ ರೀತಿಯ ಏರುಪೇರು ಉಂಟಾಗಲು ಸಾಧ್ಯವಿರುವುದಿಲ್ಲ. ಒಟ್ಟಾರೆ ಪರೀಕ್ಷೆ ಎಂದಾಕ್ಷಣ 'ಭಯ' ಬೇಡ. ಮಾನಸಿಕ ಒತ್ತಡ ಕೂಡದು. ಈ ಸ್ಥಿತಿಯನ್ನು ತಲುಪದಿರಲು ಏನುಮಾಡಬೇಕು? ಯಾವ ರೀತಿ ಪಾಠ ಪ್ರವಚನಗಳನ್ನು ಪುನರಾವರ್ತಿಸಬೇಕು? ಹೇಗೆ ಕ್ರಮೇಣ 'ಆತ್ಮವಿಶ್ವಾಸ' ಗಳಿಸಬಹುದು? ಇತ್ಯಾದಿ ಸಮಸ್ಯೆಗಳಿಗೆ ಇಲ್ಲಿದೆ ಪರಿಹಾರ.

ಇನ್ನೂ ಎರಡು ತಿಂಗಳುಗಳಿವೆ. ಈ ಅವಧಿ ಕಡಿಮೆ ಯೇನಲ್ಲ. ಇದುವರೆಗೆ ನೀವೇನು ಮಾಡಿದಿರೆಂದು ಮರೆತು ಇನ್ನು ಮುಂದೆ ನೀವೇನು ಮಾಡಬೇಕೆಂಬುದರ ಬಗ್ಗೆ 'ಚಿಂತನೆ' (ಆತ್ಮಾವಲೋಕನ) ಮಾಡಿಕೊಳ್ಳಿ. ಇದು ನಿರ್ಧಾರ ತೆಗೆದುಕೊಳ್ಳುವ ಸಮಯ. ನಿಮ್ಮ ಭವಿಷ್ಯ ರೂಪಿಸಿಕೊಳ್ಳಲು ಸರಿಯಾದ ಅವಕಾಶ. ಲೂಯಿ ಪ್ಯಾಶ್ಚರನ ಸಿದ್ಧಾಂತದಂತೆ 'ಮನಸ್ಸುಮಾಡು, ಕರ್ತವ್ಯ ನಿರತನಾಗು, ಕಾದು ನೋಡು.' ನೀವು ನಿರ್ಧರಿಸಲು ಸದವಕಾಶ. ದಿನಕ್ಕೆ ಕನಿಷ್ಠ 5–6 ಗಂಟೆಗಳ ವ್ಯಾಸಂಗ ಬಹಳ ಅಗತ್ಯವಿದೆ. ದಿನದ ಬೆಳಗಿನ ಜಾವ ಅತ್ಯಂತ ಸೂಕ್ತ ಸಮಯ. ಕನಿಷ್ಠ 2 ಗಂಟೆಯನ್ನು ನಿಮ್ಮ ವೇಳಾಪಟ್ಟಿಯಲ್ಲಿ ಗುರುತು ಹಾಕಿಕೊಳ್ಳಿ. ಈ ಅಮೂಲ್ಯ ಅವಧಿಯಲ್ಲಿ 'ಕ್ಲಿಷ್ಟಕರ' ವಿಷಯಗಳನ್ನು ನಿಗದಿಪಡಿಸಿಕೊಳ್ಳಿ. (ರೇಖಾಗಣಿತ, ಭೌತಶಾಸ್ತ್ರ, ಕನ್ನಡ ಮಾಧ್ಯಮದವರು ಇಂಗ್ಲೀಷ್) ಎಷ್ಟು ಸಮಯ ಓದಿದಿರಿ– ಇದು ಮುಖ್ಯವಲ್ಲ; ಎಷ್ಟು ಕಾಲ ಗಮನವಿಟ್ಟು ವ್ಯಾಸಂಗ ಮಾಡಿದಿರಿ, ಮನನ ಮಾಡಿಕೊಂಡಿರಿ, ಜ್ಞಾಪಕಶಕ್ತಿಯಲ್ಲಿ ಕಲಿಕಾಂಶಗಳನ್ನು ತುಂಬಿಕೊಂಡಿರಿ– ಇದು ಮುಖ್ಯ. ವಿದ್ಯಾರ್ಥಿಗಳಲ್ಲಿ ಒಂದು ಕಿವಿಮಾತು– ಪ್ರಿಯ ವಿದ್ಯಾರ್ಥಿಗಳೇ, ನೀವು ನಿಮ್ಮ ತಾಯ್ತಂದೆಯರನ್ನು ಮೆಚ್ಚಿಸಲು ಓದಬೇಡಿ. ನಿಮ್ಮ ಶಾಲೆಯ ಗೌರವ ಪ್ರತಿಷ್ಠೆಗಾಗಿ ಓದಬೇಡಿ, ನಿಮ್ಮ ಉಜ್ವಲ ಭವಿಷ್ಯ ನಿರೂಪಿಸುವ ಸಲುವಾಗಿ ವ್ಯಾಸಂಗಿಸಿ. ನೀವೂ ಇತರ ಬುದ್ಧಿವಂತ ವಿದ್ಯಾರ್ಥಿಗಳಂತೆಯೇ





ಸಮರ್ಥರೆಂಬುದನ್ನು ಮರೆಯದಿರಿ. 'ನನ್ನ ಹಣೆಬರಹ, ಸಾಮರ್ಥ್ಯ ಇಷ್ಟೇ' ಎಂಬ ಕೀಳರಿಮೆಯನ್ನು ಮೊದಲಿಗೆ ಮನದಿಂದ ಕಿತ್ತೊಗೆದು ವ್ಯಾಸಂಗವನ್ನು ಕ್ರಮಬದ್ಧವಾಗಿ ಆರಂಭಿಸಿ.

## ಪೋಷಕ ವರ್ಗದವರಿಗೆ ಕಿವಿಮಾತು

ನಿಮ್ಮ ಮಕ್ಕಳನ್ನು ಮೊದಲು ದೂಷಿಸುವುದನ್ನು ಅದರಲ್ಲೂ ಬೈಯುವುದನ್ನು ನಿಲ್ಲಿಸಿ. ನೀವಲ್ಲದೆ ಯಾರು ಅವರಿಗೆ ಈ ಸಂದರ್ಭದಲ್ಲಿ ಆತ್ಮವಿಶ್ವಾಸ ತುಂಬಲು ಸಮರ್ಥರು? ಅವರ ತಾರ್ಕಿಕ ರೀತಿಯ ವ್ಯಾಸಂಗಕ್ಕೆ ಸಂಪೂರ್ಣ ಸಹಕಾರ ನೀಡಿ. ಆಗಾಗ್ಗೆ ಅವರ ಮನ ಓದಿನಲ್ಲಿ ತಲ್ಲೀನವಾಗುವಂತೆ ಪ್ರಯತ್ನಿಸಿ. ಮೊದಲು ನೀವು ಟಿವಿ ಕಾರ್ಯಕ್ರಮ ವೀಕ್ಷಿಸುವಾಗಲೆಲ್ಲ ಅವರ ಹತ್ತಿರವಿರಿ 3–4 ತಿಂಗಳು ಅವರೊಂದಿಗೆ ಸಹಕರಿಸಿ. ಅವರು ತಯಾರಿಸಿರುವ ವ್ಯಾಸಂಗ ವೇಳಾಪಟ್ಟಿಯಲ್ಲಿ ಎಲ್ಲ ವಿಷಯಗಳಿವೆಯಾ? ಅದರಂತೆ ಅವರು ಓದುತ್ತಿರುವರಾ? ಗಮನಿಸಿ.

ವಿದ್ಯಾರ್ಥಿಗಳೇ ಘಟಕವಾರು ಕ್ರಮದಿಂದ ವ್ಯಾಸಂಗ ಆರಂಭಿಸುವುದು ಸೂಕ್ತ. ಉದಾ: ವರ್ಗಸಮೀಕರಣ, ಇವುಗಳ ವ್ಯತ್ಯಾಸಗಳು, ಉದಾಹರಣೆಗಳಿಂದ ವಿಂಗಡಿಸುವ ಸಾಮರ್ಥ್ಯ, ಗಳಿಕೆ ಮೂಲಗಳು, ಮೊತ್ತ, ಗುಣಲಬ್ಧ, ಸ್ವಭಾವ– ಮೂಲ ಗಳನ್ನು ಕಂಡುಹಿಡಿಯುವಿಕೆ... ವ್ಯಾಸಂಗದ ಸಂದರ್ಭದಲ್ಲಿ ಅನುಮಾನ ಬಂದಲ್ಲಿ ಅಂತಹಾ ಕಾರಣಕ್ಕೆ ನೀವು ಓದಬೇಕಾದ ಘಟಕವನ್ನು ಮುಂದೂಡದಿರಿ. ಈ ರೀತಿ ಒಂದು ವಾರಕಾಲ ಸತತವಾಗಿ ಅಭ್ಯಾಸ ಮುಂದುವರೆಸಿದರೆ ಖಂಡಿತ ಈ ಬಗೆಯ ವ್ಯಾಸಂಗ ಅದು ನಿಮ್ಮಲ್ಲಿ 'ಹ್ಯಾಬಿಟ್' ಆಗಿ ಮಾರ್ಪಡುವುದು. ಭವಿಷ್ಯ ಉಜ್ವಲವಾಗಿರುವುದರಲ್ಲಿ ಸಂದೇಹವಿರುವುದಿಲ್ಲ. •



# ಪರೀಕ್ಷೆ –ಸಿದ್ಧತೆಯ ಸೂತ್ರ




**ಹೆಚ್. ನಾಗಭೂಷಣ್ ರಾವ್**
**ಪೋಷಕರು**
**ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ**


ಯಾವುದೇ ಪರೀಕ್ಷೆ ವಿದ್ಯಾರ್ಥಿ ಜೀವನದಲ್ಲಿ ಬಹಳ ಮುಖ್ಯವಾದ ಹಂತ. ನಮ್ಮ ಮುಂದಿನ ವಿದ್ಯಾಭ್ಯಾಸ, ಹಿಂದಿನ ಪರೀಕ್ಷೆಯಲ್ಲಿ ನಾವು ಗಳಿಸಿದ ಅಂಕಗಳ ಆಧಾರದ ಮೇಲೆಯೇ ನಿಂತಿರುವುದು. ಈಗಂತೂ ಸ್ಪರ್ಧಾ ಪ್ರಪಂಚ. ಕೇವಲ 'ಎ' ಶ್ರೇಣಿ ಸಾಲದು, ಎ+ ಎ++ ನಮ್ಮ ಗುರಿ. ಅಂದ್ಮೇಲೆ ನಮ್ಮ ತಯಾರಿಯೂ ಅದಕ್ಕನುಗುಣವಾಗೇ ಇರಬೇಕಲ್ಲವೇ? ನಿಮ್ಮ ಗುರಿ ಸೇರಲು ನಿಮಗೊಂದಿಷ್ಟು ಸಲಹೆ ಸೂಚನೆಗಳು ಇಲ್ಲಿವೆ. ಇದನ್ನು ನೀವು ಪಾಲಿಸಿದಲ್ಲಿ ನಿಮಗೆ ಯಶಸ್ಸು ನಿಶ್ಚಿತ.

ಇಂಗ್ಲೀಷ್‌ನಲ್ಲಿ ಮಾತೊಂದಿದೆ "ದೇರ್ ಇಸ್ ನೋ ಶಾರ್ಟ್‌ಕಟ್ ಟು ಸಕ್ಸಸ್. ಶಾರ್ಟ್‌ಕಟ್ಸ್, ಕಟ್ ಶಾರ್ಟ್ ದಿ ಸಕ್ಸಸ್". ಈ ಕಾರಣದಿಂದ ನೀವು ಸಾಕಷ್ಟು ಮುಂಚೆಯೇ ಓದಲು ಪ್ರಾರಂಭಿಸಬೇಕು. ಮುಂಚೆ ಎಂದರೆ ಯಾವಾಗ? ನೀವು ಹಿಂದಿನ ಪರೀಕ್ಷೆ ಅಥವಾ ಕಿರುಪರೀಕ್ಷೆ (ಟೆಸ್ಟ್) ಮುಗಿದ ಮರುದಿನದಿಂದಲೇ ಮುಂದಿನ ಪರೀಕ್ಷೆಗೆ ಓದುವುದು ಅತ್ಯಂತ ಸೂಕ್ತ.

### ಪರೀಕ್ಷೆಯನ್ನು ದ್ವೇಷಿಸದಿರಿ ಅಥವಾ ಭಯಪಡದಿರಿ

ಕೆಲವು ವಿದ್ಯಾರ್ಥಿಗಳು ಚೆನ್ನಾಗಿ ಓದುತ್ತಾರೆ, ಆದರೂ ಪರೀಕ್ಷೆಯಲ್ಲಿ ಕಡಿಮೆ ಅಂಕಗಳಿಸುತ್ತಾರೆ. ಇದಕ್ಕೆ ಕಾರಣ ಅವರಿಗಿರುವ ಪರೀಕ್ಷಾ ಭಯ. ಕೆಲವರಂತೂ ಪ್ರಶ್ನಪತ್ರಿಕೆ ಉತ್ತರಿಸುವಾಗ ವಿಪರೀತ ಬೆವರುವುದು, ನೀರು ಕುಡಿಯುವುದು, ಟೈಂ ಎಷ್ಟೆಂದು ಪದೇ ಪದೇ ಕೇಳುವುದು ಮುಂತಾದವನ್ನು ಮಾಡುತ್ತಾರೆ. ಇದಕ್ಕೆ ಭಯವೇ ಕಾರಣ. ಆದ್ದರಿಂದ ಓದಲು ಪ್ರಾರಂಭಿಸುವ ಮುನ್ನ ಆತ್ಮವಿಶ್ವಾಸದಿಂದ ಓದಿರಿ. ನಿಮ್ಮ ಆತ್ಮವಿಶ್ವಾಸ ಹೆಚ್ಚಿದಷ್ಟೂ ಪರೀಕ್ಷಾ ಭಯ ದೂರವಾಗುವುದು. ಯಶಸ್ಸಿನ ಮೊದಲ ಹಂತವೇ ಆತ್ಮವಿಶ್ವಾಸ.

ಉತ್ತಮ ವೇಳಾಪಟ್ಟಿ ತಯಾರಿಸಿರಿ: ನೀವು ಮನೆ ಕಟ್ಟುವುದನ್ನು ನೋಡಿದ್ದೀರಾ? ನೀಲನಕ್ಷೆ ಇಲ್ಲದೆ ಯಾರಾದರೂ ಮನೆಕಟ್ಟುವರಾ? ಹಾಗೆಯೇ ನೀವೂ ಸಹ ನಿಮ್ಮ ಅಧ್ಯಯನದ ನೀಲನಕ್ಷೆ ತಯಾರಿಸಿಕೊಳ್ಳಬೇಕು. ಅದನ್ನೇ 'ಟೈಂ ಟೇಬಲ್' ಎಂದು ಕರೆಯುವುದು. ಪರೀಕ್ಷೆಗೆ ಇನ್ನೆಷ್ಟು ದಿನ ಇದೆ? ನನಗೆ ಓದಲು ಸಿಗುವ ಅವಧಿ ಎಷ್ಟು? ಎಷ್ಟು ವಿಷಯಗಳಿವೆ? ಪ್ರತಿ ವಿಷಯಕ್ಕೆ ಸಿಗುವ ಕಾಲಾವಧಿ ಎಷ್ಟು? ಇದೆಲ್ಲಾ ಪ್ರಶ್ನೆಗಳಿಗೆ ಉತ್ತರವೇ ಟೈಂ ಟೇಬಲ್. ಇದರಲ್ಲಿ ಕಷ್ಟಕರವಾದ ವಿಷಯಗಳಿಗೆ ಹೆಚ್ಚು ಸಮಯ ಕೊಡಬೇಕು. ಇಷ್ಟವಾದ ವಿಷಯಗಳಿಗೆ ಕಡಿಮೆ ಸಮಯ ಸಾಕು. ನೆನಪಿಡಿ– ದೇವರು ಎಲ್ಲರಿಗೂ ಕೊಟ್ಟಿರುವುದು 24 ಗಂಟೆ ಮಾತ್ರ. ಇದರಲ್ಲಿ ನಿದ್ದೆ 6–7 ಗಂಟೆ, ಶಾಲಾ ಅವಧಿ 6–7 ಗಂಟೆ, ಊಟ–ತಿಂಡಿ, ಸ್ನಾನ–ಪಾನ, ಆಟ–ನೋಟಗಳಿಗೆ ಸಮಯ ತೆಗೆದು, ಉಳಿದೆಲ್ಲ ಸಮಯವನ್ನು ಓದಲು ಮೀಸಲಿಡಿ. ಹ್ಞಾಂ! ನೆನಪಿಡಿ. ನಿಮ್ಮ ಟೈಂ ಟೇಬಲ್‌ನಲ್ಲಿ ಮನರಂಜನೆಗೂ ಸ್ವಲ್ಪ ಸಮಯ ಮೀಸಲಿಡಿ! ಎರಡು ವಿಷಯಗಳನ್ನು ಓದುವ ನಡುವೆ ವಿರಾಮವಿರಲಿ ಹಾಡು ಕೇಳಿ, ಹಾಡಿ, ಮನಸ್ಸಿಗೆ ವಿಶ್ರಾಂತಿ ನೀಡಿ.

ಪುಟ 5 ಕ್ಕೆ ➤

➢ ಪುಟ 4 ರಿಂದ..... ಪರೀಕ್ಷೆ

## ಓದಲೊಂದು ಜಾಗ

ಮನೆಯಲ್ಲಿ ಓದಲೊಂದು ಅನುಕೂಲಕರ ಜಾಗ ಹುಡುಕಿ. ಟಿ.ವಿ ಮುಂದೆ ಕೂತು ಓದದಿರಿ. ಅಡುಗೆಮನೆ ಹತ್ತಿರವಂತೂ ಬೇಡವೇ ಬೇಡ. ನೀವು ಆರಿಸುವ ಜಾಗ ನಿಮ್ಮ ಏಕಾಗ್ರತೆಗೆ ಭಂಗ ತರಬಾರದು. ನೀವು ಓದುವ ಸಮಯವೂ ಬಹಳ ಮುಖ್ಯ. ಬೆಳಗಿನ ಜಾವದ ಓದು ಮನಸ್ಸಿಗೆ ನಾಟುತ್ತದೆ. ನಿಶ್ಯಬ್ಧ ವಾತಾವರಣದಲ್ಲಿ ಏಕಾಗ್ರತೆ ಅಧಿಕ. ಪೂರ್ವದಿಕ್ಕಿಗೆ ಮುಖ ಮಾಡಿ. ನಿಮ್ಮ ಅಂಕ ಗಳಿಕೆ ಜಾಸ್ತಿ ಆದೀತು! (ಸೂರ್ಯ ರಶ್ಮಿಯಿಂದ ತೂಕಡಿಕೆ ಕಡಿಮೆಯಾಗುತ್ತದಲ್ಲವೇ?)

## ಕೂರುವ ಭಂಗಿ

ಇದೇನು ವಿಚಿತ್ರ ಸಲಹೆ ಎಂದು ಭಾವಿಸದಿರಿ. ಏಕಾಗ್ರತೆಗೆ ನೀವು ಕೂರುವ ಭಂಗಿಯೂ ಅತಿಮುಖ್ಯ. ಹಾಸಿಗೆಗೆ ಒರಗಿ, ಈಸೀ ಚೇರ್‌ನಲ್ಲಿ ಕೂತು ಓದದಿರಿ. ನಿಮ್ಮ ಬೆನ್ನ ಮೂಳೆ ನೆಟ್ಟಗಿರಲಿ. ಕಾಲನ್ನು ಒಂದು ಮಣೆಯ ಮೇಲಿಡಿ. ನೆಲದ ಮೇಲಿಟ್ಟಲ್ಲಿ ನಿದ್ದೆ ಬಂದೀತು! ಪುಸ್ತಕದ ಮೇಲೆ ಸಾಕಷ್ಟು ಬೆಳಕು ಬೀಳುತ್ತಿರಲಿ. ಮಂದ ಬೆಳಕು ನಿದ್ದೆಗೆ ಆಹ್ವಾನ.

## ಟಿಪ್ಪಣಿ ಮಾಡಿಕೊಳ್ಳಿರಿ

ಟಿಪ್ಪಣಿ ಮಾಡುವುದು ಬಹಳ ಮುಖ್ಯವಾದ ಅಂಶ. ಓದುವಾಗ ಒಂದು ಪುಸ್ತಕ ಪೆನ್ನು ಜತೆಗಿರಲಿ. ನೀವು ಓದಿದ ವಿವರಗಳನ್ನೆಲ್ಲಾ ಸಣ್ಣ ಸಣ್ಣ ಅಂಶಗಳಾಗಿ ಗುರುತು ಮಾಡಿಕೊಳ್ಳಿ. ನೀವು ಮತ್ತೆ ಓದಿದಾಗ (ರಿವಿಷನ್) ಇದು ನಿಮ್ಮ ಉಪಯೋಗಕ್ಕೆ ಬಂದೀತು. ಪಠ್ಯಪುಸ್ತಕ ಅಥವಾ ನೋಟ್ಸ್ ಓದಲು ಸಮಯವಿಲ್ಲದಾಗ ಈ ಮುಖ್ಯಾಂಶಗಳನ್ನು ಮಾತ್ರ ಓದಿದರೆ ಸಾಕು.

## ಆರೋಗ್ಯದತ್ತ ಗಮನ ಕೊಡಿ

ಪರೀಕ್ಷೆ ಎಷ್ಟು ಮುಖ್ಯವೋ, ಅದಕ್ಕಿಂತ ಮುಖ್ಯ ನಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳುವುದು. ಹಿಂದಿನ ರಾತ್ರಿ ನಿದ್ದೆಗೆಟ್ಟು ಓದಿ ಮರುದಿನ ಪರೀಕ್ಷಾ ಕೊಠಡಿಯಲ್ಲಿ ನಿದ್ದೆ ಮಾಡಿದ, ವಾಂತಿ ಮಾಡಿದ ವಿದ್ಯಾರ್ಥಿಗಳನ್ನು ಕಂಡಿದ್ದೇನೆ. ಆದ್ದರಿಂದ ನಿಮಗೆ 6 ಗಂಟೆ ನಿದ್ದೆ ತುಂಬಾ ಅಗತ್ಯವಿದೆ. ಪರೀಕ್ಷೆಯ ಹಿಂದಿನ ದಿನವಂತೂ ಶಾಂತಚಿತ್ತರಾಗಿ ನಿದ್ರಿಸಿ. ಇದೇ ರೀತಿ ಆಹಾರದ ಕಡೆಗೂ ಗಮನ ಕೊಡುವುದು ಅಗತ್ಯ. ಪೌಷ್ಟಿಕವಾದ ಆಹಾರ ಸೇವಿಸಿ. ಹಾದಿಬೀದಿಯ ತಿಂಡಿ ತಿನಿಸನ್ನು ತಿನ್ನಬೇಡಿರಿ. ರಾತ್ರಿ ಮಲಗುವ ಮುನ್ನ ಒಂದು ಲೋಟ ನೀರು ಕುಡಿಯಲು ಮರೆಯಬೇಡಿ. ಇದು ನಿಮ್ಮ ಮಿದುಳಿನ ಜೀವಕೋಶಗಳನ್ನು ಉತ್ತೇಜಿಸುತ್ತದೆ.

## ಪರೀಕ್ಷೆ ದಿನ

ಪರೀಕ್ಷೆಯ ಹಿಂದಿನ ದಿನವೇ ಬರೆಯಲು ಅಗತ್ಯವಿರುವ ಪೆನ್ನು, ಪೆನ್ಸಿಲ್, ರಬ್ಬರ್, ಸಲಕರಣೆಗಳ ಬಾಕ್ಸ್, ಹಾಲ್ ಟಿಕೆಟ್ ಮುಂತಾದವನ್ನು ವ್ಯವಸ್ಥಿತವಾಗಿ ಜೋಡಿಸಿಕೊಳ್ಳಿರಿ. ಅಂದು ಬೇಗ ಮಲಗಿ, ಬೇಗ ಏಳಿರಿ. ನಿಮ್ಮ ಟಿಪ್ಪಣಿ ಪುಸ್ತಕವನ್ನೊಮ್ಮೆ ಓದಿ ಮನನ ಮಾಡಿರಿ. ಸಾಕಷ್ಟು ಮುಂಚೆಯೇ ಪರೀಕ್ಷಾ ಕೇಂದ್ರವನ್ನು ತಲುಪಿರಿ(ಕನಿಷ್ಠ ಅರ್ಧಗಂಟೆ ಮುನ್ನ) ನಿಮ್ಮ ಸೀಟ್ ನಂಬರ್, ಕೊಠಡಿ ಕ್ರಮಾಂಕ ಮೊದಲಾದವನ್ನು ತಿಳಿದುಕೊಳ್ಳಿರಿ. ತಡವಾಗಿ ಹೋದರೆ ಗಾಬರಿಯಾಗುತ್ತದೆ. ಇದರಿಂದ ನಿಮ್ಮ ಮಾನಸಿಕ ಸಂತುಲನ ತಪ್ಪಿ ಉತ್ತರ ಬರೆಯುವುದರ ಮೇಲೆ ಪರಿಣಾಮವಾಗುತ್ತದೆ; ಎಚ್ಚರ.

## ಪರೀಕ್ಷಾ ಕೊಠಡಿಯಲ್ಲಿ

ಉತ್ತರ ಪತ್ರಿಕೆಯಲ್ಲಿ ನೀಡಬೇಕಾದ ಎಲ್ಲ ಮಾಹಿತಿಯನ್ನೂ ಚಿತ್ತಿಲ್ಲದೆ ಭರ್ತಿ ಮಾಡಿ. ನಿಮ್ಮ ಹಾಲ್ ಟಿಕೆಟ್ ಕ್ರಮಾಂಕವನ್ನು ಸ್ಪಷ್ಟವಾಗಿ ನಮೂದಿಸಿ. ಪ್ರಶ್ನೆ ಪತ್ರಿಕೆ ಕೈಗೆ ಬಂದ ಕೂಡಲೇ ಅದನ್ನೊಮ್ಮೆ ಅವಲೋಕಿಸಿ. ಕೆಲವೊಮ್ಮೆ ಕೊನೇ ಪುಟ ಮುದ್ರಿತವಾಗದಿರುವ ಸಂಭವವಿರುತ್ತದೆ. ನಿಮ್ಮ ಬರೆಯುವ ಸಲಕರಣೆಗಳನ್ನು ಬೆಂಚಿನ ಮೇಲೆ ಜೋಡಿಸಿಕೊಳ್ಳಿರಿ.

## ಉತ್ತರಿಸುವ ಮುನ್ನ

ನಿಮಗೆ ಚೆನ್ನಾಗಿ ಅರ್ಥವಾಗಿರುವ, ವಿಶ್ವಾಸದಿಂದ ಉತ್ತರಿಸಬಲ್ಲ ಪ್ರಶ್ನೆಗಳನ್ನು ಮೊದಲು ಉತ್ತರಿಸಿ. ಪ್ರಶ್ನೆಗಳನ್ನು ಅದೇ ಕ್ರಮದಲ್ಲಿ ಉತ್ತರಿಸಬೇಕಾದ ಅಗತ್ಯವಿಲ್ಲ. ನೀವು ಉತ್ತರಿಸುವ ಕ್ರಮ ಅತಿಮುಖ್ಯ. ಅದು ನಿಮ್ಮ ಅಂಕಗಳಿಕೆಯ ಮೇಲೆ ತುಂಬಾ ಪರಿಣಾಮ ಬೀರುತ್ತದೆ. ನೀವು ಎಷ್ಟೇ ಓದಿರಬಹುದು, ಆದರೆ ಅದನ್ನು ಹೇಗೆ ನಿರೂಪಿಸುವಿರಿ ಎಂಬುದು ಮುಖ್ಯ. ಅಗತ್ಯಕ್ಕಿಂತ ಉದ್ದವಾದ ಉತ್ತರವನ್ನು ಬರೆಯದಿರಿ. ನಿಮಗೆ ಉತ್ತರ ತಿಳಿಯದ್ದನ್ನು ಬರೆಯದಿರಿ. ಮೌಲ್ಯಮಾಪಕ ದಿನಕ್ಕೆ 20–25 ಉತ್ತರ ಪತ್ರಿಕೆ ತಿದ್ದ ಬೇಕಾಗುತ್ತದೆ. ಅವರು ಉತ್ತರದ ಮುಖ್ಯವಾದ ಅಂಶಗಳನ್ನು ಮಾತ್ರ ಹುಡುಕುತ್ತಾರೆ. ಆದ್ದರಿಂದ ಉತ್ತರಗಳನ್ನು ಅಂಶಗಳ ರೂಪದಲ್ಲೇ ಉತ್ತರಿಸಿ.

ನಿಮ್ಮ ಕೈಬರಹ ಓದುವಂತಿರಲಿ. ಚಿಕ್ಕದಾಗಿ ಚೊಕ್ಕವಾಗಿ ಉತ್ತರಿಸಿ. 'ಫಸ್ಟ್ ಇಂಪ್ರೆಷನ್ ಈಸ್ ದಿ ಬೆಸ್ಟ್ ಇಂಪ್ರೆಷನ್' ಎಂಬಂತೆ ನಿಮ್ಮ ಪ್ರಾರಂಭದ ಉತ್ತರಗಳು ಬೆಸ್ಟ್ ಆಗಿರಲಿ. ಅದರಿಂದ ಪರೀಕ್ಷಕನ ಮನಸ್ಸು ಗೆಲ್ಲುವಿರಿ.

ಉತ್ತರಿಸುವಾಗ ಸಮಯದ ಹೊಂದಾಣಿಕೆ ಅತಿಮುಖ್ಯ. ಪರೀಕ್ಷೆಗೆ ಮೊದಲು ನೀವು 4–6 ಪತ್ರಿಕೆಗಳನ್ನು ಮನೆಯಲ್ಲಿ

ಪುಟ 6 ಕ್ಕೆ ➢

➤ ಪುಟ 5 ರಿಂದ..... ಪರೀಕ್ಷೆ

ಗಡಿಯಾರ ಇಟ್ಟುಕೊಂಡು ಉತ್ತರಿಸಿದ್ದರೆ, ಪರೀಕ್ಷೆಯಲ್ಲೂ ಸಮಯವನ್ನು ಹೊಂದಿಸುವ ಕಲೆ ಸಿದ್ಧಿಸುತ್ತದೆ. ಯಾವುದೇ ಪ್ರಶ್ನೆಯನ್ನೂ ಉತ್ತರ ತಿಳಿಯದೆಂದು ಬಿಡದಿರಿ. ಸ್ವಲ್ಪವಾದರೂ ಬರೆಯಿರಿ; ಗಣಿತ ಪತ್ರಿಕೆ ಉತ್ತರಿಸುವಾಗ ಸೂತ್ರ ಹಾಕಿದರೂ ಅರ್ಧ ಅಂಕ ಸಿಗುತ್ತದೆ. ಪಠ್ಯ ಹೊರತಾದ ಪ್ರಶ್ನೆ ಎಂದು ಬಿಡುವುದರಿಂದ ನಷ್ಟವೇ ಜಾಸ್ತಿ. ಆದರೆ ಕ್ರಮಸಂಖ್ಯೆ ಹಾಕಿದ್ದರೆ ಪೂರ್ತಿ ಅಂಕ ಸಿಗುತ್ತದೆ ಎಂಬುದು ನೆನಪಿರಲಿ.

### ದುರ್ವ್ಯವಹಾರ ಬೇಡ

ಪ್ರೀತಿಯ ವಿದ್ಯಾರ್ಥಿಗಳೇ ಪರೀಕ್ಷಾ ಕೊಠಡಿಯಲ್ಲಿ ದುರ್ವ್ಯವಹಾರ ಮಾಡದಿರಿ. ಕಾಪಿ ಮಾಡುವುದು ಮಹಾ ಪಾಪ. ಪರೀಕ್ಷನ ಕಣ್ತಪ್ಪಿಸಬಹುದು ಆದರೆ ನಿಮ್ಮ ಅಂತರಾತ್ಮನ ಕಣ್ತಪ್ಪಿಸಲಾರಿರಿ. ನಿಮಗೆ ಉತ್ತರ ತಿಳಿಯದಿದ್ದರೆ ಬರೆಯದಿರಿ. ಪರೀಕ್ಷೆ ಪಾಸಾಗುವುದೇ ಜೀವನದ ಗುರಿಯಲ್ಲ. ಮೌಲ್ಯಗಳನ್ನು ಜೀವನದಲ್ಲಿ ರೂಢಿಸಿಕೊಳ್ಳುವುದೇ ಜೀವನದ ಗುರಿ. ಕಾಪಿ ಮಾಡಿ ಸಿಕ್ಕಿ ಬಿದ್ದರೆ ಮಾನ– ಮಾರ್ಯಾದೆ ಹೋಗುತ್ತದೆ. ಜತೆಗೆ ವರ್ಷದ ನಷ್ಟವೂ ಆಗುತ್ತದೆ.

### ನಿಮ್ಮಲ್ಲಿ ಶ್ರದ್ಧೆ ಇರಲಿ, ದೇವರನ್ನೂ ನಂಬಿ

ಈ ಕೊನೆಯ ಅಂಶ ಅತಿ ಮುಖ್ಯ. ನಾನು ಗೆದ್ದೇ ಗೆಲ್ಲುವೆ ಎಂಬ ಆತ್ಮವಿಶ್ವಾಸ ಮೂಡಿಸಿಕೊಳ್ಳಿ. ನಿಮ್ಮ ಸಾಧನೆ ಬಗ್ಗೆ ನಿಮಗೆ ಶ್ರದ್ಧೆ ಇರಲಿ. ಪರೀಕ್ಷೆಗೆ ಮುನ್ನ ದೀರ್ಘ ಉಸಿರು ತೆಗೆದುಕೊಂಡು, ನಿಮ್ಮ ನೆಚ್ಚಿನ ದೇವರನ್ನು ಪ್ರಾರ್ಥಿಸಿ. ಪ್ರಾರ್ಥನೆ ನಿಮಗೆ ಶಕ್ತಿ, ಆತ್ಮಸ್ಥೈರ್ಯ ನೀಡುತ್ತದೆ. ಮನಸ್ಸನ್ನು ಶಾಂತಗೊಳಿಸುತ್ತದೆ. ಆಗ ಉತ್ತರಗಳು ಗಂಗಾನದಿಯಂತೆ ಹರಿಯತ್ತದೆ.

### ಅತಿ ಮುಖ್ಯ ಅಂಶ

ಪರೀಕ್ಷೆಯ ನಂತರ ನಿಮ್ಮ ಗೆಳೆಯರೊಡನೆ ಪ್ರಶ್ನೋತ್ತರವನ್ನು ಚರ್ಚಿಸದಿರಿ. ಅದರಿಂದ ನಿಮಗೆ ಏನೂ ಲಾಭವಿಲ್ಲ. ಬದಲಿಗೆ ನಿಮ್ಮ ಮನಸ್ಸನ್ನು ಕಂಗೆಡಿಸುತ್ತದೆ. ಪರೀಕ್ಷೆಯ ನಂತರ ಸೀದಾ ಮನೆಗೆ ಬಂದು ಮುಂದಿನ ಪತ್ರಿಕೆಗೆ ಸಿದ್ಧತೆ ಮಾಡಿರಿ.

ಮಕ್ಕಳೇ, ನಿಮ್ಮ ತಾಯಿ– ತಂದೆ ನಿಮ್ಮಿಂದ ಬಹಳ ನಿರೀಕ್ಷೆಯನ್ನು ಇಟ್ಟುಕೊಂಡಿರುತ್ತಾರೆ. ನಿಮ್ಮ ಬಗ್ಗೆ ಅನೇಕ ಕನಸುಗಳನ್ನು ಕಟ್ಟಿಕೊಂಡಿರುತ್ತಾರೆ. ನೀವು ಅವರ ಬಗ್ಗೆ ಯೋಚಿಸಿ, ಅವರನ್ನು ನಿರಾಶೆಗೊಳಿಸದಿರಿ. ನೀವು ಅವರಿಗೆ ಕೊಡಬಹುದಾದ ಮೆಚ್ಚಿನ ಕಾಣಿಕೆ ಎಂದರೆ ನಿಮ್ಮ ಯಶಸ್ಸಿನ ಅಂಕಪಟ್ಟಿ. ನಿಮ್ಮ ಹೆಸರು ಪತ್ರಿಕೆಯಲ್ಲಿ ಬಂದರೆ ಅವರಿಗೆ ಸ್ವರ್ಗಕ್ಕೆ ಒಂದೇ ಗೇಣು. ನೀವು ಓದಬೇಕಾದ್ದು ನಿಮಗಾಗಿ ಮಾತ್ರವಲ್ಲ. ನಿಮ್ಮನ್ನು ಪ್ರೀತಿಸುವವರಿಗಾಗಿಯೂ ಹೌದು.

# ಪೋಷಕರಿಗೆ ಸಲಹೆ

ಆತ್ಮೀಯ ಪೋಷಕರೇ, ಪರೀಕ್ಷೆಯ ಸಮಯ, ನಿಮ್ಮ ಮಕ್ಕಳಿಗೆ ಮಾತ್ರವಲ್ಲ ನಿಮಗೂ ಪರೀಕ್ಷೆಯೇ! ಕೇವಲ ಪರೀಕ್ಷೆಯ ಸಮಯದಲ್ಲಿ ನಿಮ್ಮ ಮಕ್ಕಳ ಕಡೆ ಗಮನ ನೀಡಿದರಷ್ಟೇ ಸಾಲದು, ವರ್ಷಪೂರ್ತಿ ಅವರಿಗೆ ಮಾರ್ಗದರ್ಶಕ ರಾಗಿರಬೇಕು. ಈ ಕೆಳಗಿನ ಸಲಹೆಗಳನ್ನು ದಯವಿಟ್ಟು ಗಮನಿಸಿ.

### 1. ನಿಮ್ಮ ಮಗುವಿಗೊಂದಷ್ಟು ಸಮಯ ಕೊಡಿ

ಇಂದಿನ ಬಿಡುವಿಲ್ಲದ ಯುಗದಲ್ಲಿ ಮಕ್ಕಳು ತಾಯ್ತಂದೆಯರ ಪ್ರೀತಿ ಬಯಸುತ್ತಾರೆ. ಆದ್ದರಿಂದ ಅವರೊಂದಿಗೆ ಸ್ವಲ್ಪ ಸಮಯ ಕಳೆಯಿರಿ. ಅವರಿಗೆ ಓದಲು, ಹೋಮ್‌ವರ್ಕ್, ಪ್ರಾಜೆಕ್ಟ್ ಮಾಡಲು ಸಹಕರಿಸಿ. ಉತ್ತಮ ವೇಳಾಪಟ್ಟಿ ಮಾಡಿಕೊಡಿ. ಅದನ್ನು ಮಕ್ಕಳು ಪಾಲಿಸುತ್ತಾರೆಯೇ ಎಂಬುದನ್ನು ಗಮನಿಸುತ್ತಿರಿ.

### 2. ಶಾಲೆಗೆ ಭೇಟಿ ಕೊಡಿ

ಆಗಾಗ್ಗೆ ನಿಮ್ಮ ಮಗುವಿನ ಶಾಲೆಗೆ ಭೇಟಿ ಕೊಡಿ. ಅವರ ಅಧ್ಯಾಪಕರೊಂದಿಗೆ ನಿಮ್ಮ ಮಗುವಿನ ನಡವಳಿಕೆ, ಓದು ಇದರ ಬಗ್ಗೆ ಚರ್ಚಿಸಿ.


### 3. ಮಗುವನ್ನು ಗೌರವಿಸಿ

ನಿಮ್ಮ ಮಗುವಿನ ಪ್ರೀತಿಯನ್ನು ಗಳಿಸಿ. ಅವರ ಭಾವನೆಗಳನ್ನು ಅರ್ಥಮಾಡಿಕೊಳ್ಳಿ. ತನ್ನ ಭಾವನೆಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳುವಷ್ಟು ಅವರಿಗೆ ಹತ್ತಿರವಾಗಿ. ಕಡಿಮೆ ಅಂಕ ಬಂದಾಗ ತೆಗಳದಿರಿ. ಬೇರೊಂದು ಮಗುವಿನೊಂದಿಗೆ ಹೋಲಿಸದಿರಿ. 'ಪಕ್ಕದ ಮನೆ ಕಿಟ್ಟ ನಿನಗಿಂತ ಜಾಣ' ಎಂದಾಗ ನಿಮ್ಮ ಮಗುವಿನ ಆತ್ಮಸ್ಥೈರ್ಯ ಉಡುಗುತ್ತದೆ. ಅವರ ಆತ್ಮಸ್ಥೈರ್ಯವನ್ನು ಹೆಚ್ಚಿಸುವಂತೆ ನಡೆದುಕೊಳ್ಳಿರಿ.

### 4. ನಿಮ್ಮ ಮಗುವಿನ ಆರೈಕೆ

ನಿಮ್ಮ ಮಗುವಿನ ಆಹಾರದ ಬಗ್ಗೆ ವಿಶೇಷ ಗಮನವಿರಲಿ. ಪರೀಕ್ಷೆಯ ದಿನವಂತೂ ಆಲೂ ಚಿಪ್ಸ್, ಕರಿದ ಪದಾರ್ಥಗಳು

ಪುಟ 7 ಕ್ಕೆ ➤



➢ ಪುಟ 6 ರಿಂದ..... ಪರೀಕ್ಷೆ

ಮುಂತಾದವನ್ನು ಕೊಡಬೇಡಿ. ಅತಿ ಖಾರ, ರೆಫ್ರಿಜಿರೇಟರ್‌ನಿಂದ ತೆಗೆದ ತಂಪು ಪದಾರ್ಥಗಳನ್ನು ವರ್ಜಿಸಿ, ಹಾಲು, ಮೊಸರು, ಜೇನು ಮುಂತಾದವು ಶಕ್ತಿವರ್ಧಕ ಅದನ್ನು ನೀಡಿ. ಕನಿಷ್ಠ 7 ಗಂಟೆ ನಿದ್ರೆಗೆ ಅವಕಾಶ ಮಾಡಿಕೊಡಿ. ಕೊನೆಯದಾಗಿ ಪರೀಕ್ಷೆಗೆ ಹೋಗುವ ಮುನ್ನ ಆಶೀರ್ವದಿಸಿ ಕಳಿಸಿ. ಅಂದು ಯಾವ ಕಾರಣಕ್ಕೂ ಮಗುವಿನ ಮನಸ್ಸನ್ನು ಮುದಡದಿರಿ. ಪರೀಕ್ಷೆಯಿಂದ ಬಂದ ಕೂಡಲೇ ನೂರೆಂಟು ಪ್ರಶ್ನೆ ಹಾಕದೆ ಮರುದಿನದ ಸಿದ್ಧತೆಗೆ ಸಹಕರಿಸಿರಿ.

### 5. ನಿಮ್ಮ ಮಗು 'ಕೂಚುಭಟ್ಟ' ಆಗದಿರಲಿ

'ಓದಿ ಓದಿ ಮರುಳಾದ ಕೂಚುಭಟ್ಟ' ಎಂಬ ಗಾದೆ ಇದೆ. ಸದಾ ಓದು ಓದು ಎಂದು ಮಗುವನ್ನು ಆಗ್ರಹಿಸದಿರಿ. ಬುದ್ಧಿಯೊಂದಿಗೆ ಶರೀರ, ಮನಸ್ಸಿಗೂ ಶಿಕ್ಷಣ ಬೇಕು. ಸದೃಢವಾದ ಶರೀರದಲ್ಲಿ ಆರೋಗ್ಯಕರ ಮನಸ್ಸಿರುತ್ತದೆ. ಆದ್ದರಿಂದ ನಿಮ್ಮ ಮಕ್ಕಳನ್ನು ಯೋಗಾಭ್ಯಾಸದಲ್ಲಿ ತೊಡಗಿಸಿ. ಶಾಲೆಯಲ್ಲಿ ಯಾವುದಾದರೊಂದು ಆಟವಾಡಲು ಪ್ರೋತ್ಸಾಹಿಸಿ. ಹಾಡು, ಹಸೆ, ನಾಟ್ಯ, ಚಿತ್ರಕಲೆ ಇತ್ಯಾದಿ ಕಲಾಪ್ರಕಾರಗಳ ಯಾವುದಾದರೊಂದರಲ್ಲಿ ತರಬೇತಿ ಕೊಡಿಸಿ. ಮನೆಯಲ್ಲಿ ಮುಂಜಾನೆ ಏಳುವುದು, ವ್ಯಾಯಾಮ ಮಾಡುವುದು, ಸ್ನಾನಮಾಡಿ ದೇವರ ಪ್ರಾರ್ಥನೆ ಮಾಡುವುದು, ಮನೆಯಲ್ಲಿನ ಹಿರಿಯರಿಗೆ ನಮಸ್ಕರಿಸುವುದು ನೆಂಟರಿಷ್ಟರೊಂದಿಗೆ ಬೆರೆಯುವುದು ಮುಂತಾದ ಮೌಲ್ಯ ಶಿಕ್ಷಣವನ್ನೂ ನೀಡಿರಿ. ಇದೆಲ್ಲಾ ಅವರ ವ್ಯಕ್ತಿತ್ವವನ್ನು ರೂಪಿಸುವುದರಲ್ಲಿ ತುಂಬ ಮಹತ್ವದ ಪಾತ್ರವನ್ನು ವಹಿಸುತ್ತದೆ. ●

## ವಿದ್ಯಾರ್ಥಿ ಮಿತ್ರ – 16




### 1. ರಸಪ್ರಶ್ನೆಗೆ ಉತ್ತರಿಸಿರಿ.

1. ಪೆಂಗೋಪದೇಶ ಕೃತಿ ರಚಿಸಿದವರು ಯಾರು
2. ಎಸ್–16 ಯುದ್ಧ ವಿಮಾನ ಚಾಲನೆ ಮಾಡಿದ ಮೊದಲ ಭಾರತೀಯ ಯಾರು ?
3. ಹಬಲ್ ಬಾಹ್ಯಾಕಾಶ ದೂರದರ್ಶಕ ಯಾವ ಬಾಹ್ಯಾಕಾಶ ಸಂಶೋಧನೆಗೆ ಸೇರಿದೆ ?
4. ನೆಲ್ಸನ್ ಮಂಡೇಲಾ ಎಷ್ಟು ವರ್ಷಗಳ ಕಾಲ ಸೆರೆಮನೆವಾಸ ಅನುಭವಿಸಿದರು ?
5. ದೇಶದಲ್ಲಿ ಅತ್ಯಂತ ಹೆಚ್ಚು ಇಲಿಮಿನೈಟ್ ಖನಿಜ ಹೊಂದಿರುವ ರಾಜ್ಯ ಯಾವುದು ?
6. ಬ್ಲಾಕ್ ಪಗೋಡಾ ಎಂದು ಕರೆಯಲ್ಪಡುವ ಭಾರತದ ದೇವಸ್ಥಾನ ಯಾವುದು ?
7. ಅಂತಾರಾಷ್ಟ್ರೀಯ ಪುನರುತ್ಪಾದನೆಯ ಇಂಧನ ಸಂಸ್ಥೆ (ಐಆರ್‌ಇಎಂಎ)ಯ ಮುಖ್ಯ ಕಛೇರಿ ಎಲ್ಲಿದೆ ?
8. ಸ್ಟಾಕ್ ಮಾರ್ಕೆಟ್ ಖ್ಯಾತಿ ಹೊಂದಿರುವ ದಾಲ್‌ಸ್ಟ್ರೀಟ್ ಎಲ್ಲಿದೆ ?
9. ಭಾರತದ ಯಾವ ನಗರದಲ್ಲಿ ಇಥೆನಾಲ್‌ನಿಂದ ಚಲಿಸುವ ಬಸ್ ಸಾರಿಗೆ ಆರಂಭವಾಗಿದೆ ?
10. ರಾಜಸ್ಥಾನದ ರಾಜ್ಯ ಪ್ರಾಣಿಯನ್ನು ಕಳೆದ ವರ್ಷವಷ್ಟೇ ಘೋಷಣೆ ಮಾಡಲಾಗಿದೆ. ಅದು ಯಾವುದು ?

(ಉತ್ತರಗಳು ಮುಂದಿನ ಸಂಚಿಕೆಯಲ್ಲಿ...)

– ವಿ. ರಾಜ, ಅಧ್ಯಾಪಕರು, ನ್ಯಾಷನಲ್ ಹೈಸ್ಕೂಲ್, ಬೆಂಗಳೂರು

# ಸ್ಫೂರ್ತಿಯ ಸೆಲೆ–ಮೇಡಂ ಕ್ಯೂರಿ



**ಆರ್. ಸೀತಾಲಕ್ಷ್ಮಿ**
**ಮಹಿಳಾ ವಿಭಾಗ ಕಾರ್ಯದರ್ಶಿ**
**ಅಖಿಲ ಭಾರತೀಯ ರಾಷ್ಟ್ರೀಯ**
**ಶೈಕ್ಷಿಕ ಮಹಾ ಸಂಘ**

ಮನುಕುಲದ ಏಳಿಗಾಗಿಯೇ ಉಸಿರಾಡಿದ, ಮನುಕುಲ ಕೃತಜ್ಞತೆಯಿಂದ ನೆನಪಿಸಿಕೊಳ್ಳುವ, ಕಾಲದ ಮರಳಿನ ಮೇಲೆ ಅಳಿಸಲಾಗದ ಹೆಜ್ಜೆಗಳನಿಟ್ಟ ಧೀರವ್ಯಕ್ತಿ, ಜಗತ್ತಿನಾದ್ಯಂತ ಮನೆ ಮಾತಾಗಿರುವ ಧ್ರುವತಾರೆ–ಮೇರಿ ಕ್ಯೂರಿ.

ಸಾಮಾಜಿಕ ಬದ್ಧತೆ ನಶಿಸಿ ಹೋಗುತ್ತಿರುವ ಇಂದಿನ ಸಮಾಜದಲ್ಲಿ ಈ ಮಹಾನ್ ವಿಜ್ಞಾನಿಯ ನೆನಪು ಒಂದು ಬತ್ತದ ಸ್ಫೂರ್ತಿಯ ಸೆಲೆ. ಜಗತ್ತಿನಾದ್ಯಂತ ಮನೆ ಮಾತಾಗಿರುವ ಈಕೆಯ ಮಹಾನ್ ಗುಣಗಳನ್ನು ಚಿತ್ರಿಸುವ ಸಣ್ಣ ಪ್ರಯತ್ನವೇ ಈ ಲೇಖನ.

ಮೇರಿಕ್ಯೂರಿ ಜನಿಸಿ 147 ವರ್ಷಗಳು ಸಂದಿದೆ. ತಂದೆ ಗಣಿತ ಹಾಗೂ ಭೌತಶಾಸ್ತ್ರದ ಅಧ್ಯಾಪಕರು. ಮೇನ್ಯಾ– ಮೇರಿಯ ವಾಸ್ತವ ಹೆಸರು.

ಸುಶಿಕ್ಷಿತರು, ಸುಸಂಸ್ಕೃತರೂ ಆಗಿದ್ದ ತಂದೆ ತಮ್ಮ ಆಲೋಚನೆಯಲ್ಲಿ, ನಡತೆಯಲ್ಲಿಯೂ ನಿರ್ದಿಷ್ಟತೆಯನ್ನು ಹೊಂದಿದ್ದು ಮಕ್ಕಳನ್ನು ಅತ್ಯಂತ ಜತನದಿಂದ ಬೆಳೆಸಿದರು.

ಜ್ಞಾನ ಜಗತ್ತಿನ ನಿಕಟ ಸಂಪರ್ಕದಲ್ಲಿ ಬೆಳೆದ ಮಕ್ಕಳು ಪ್ರೌಢಶಾಲೆಯಲ್ಲಿಯೇ ಚಿನ್ನದ ಪದಕಗಳಿಸಿಕೊಂಡಿದ್ದರು. ಜೀವನದಲ್ಲಿ ಬಂದ ಕಷ್ಟಗಳೆಂಬ ಬೆಂಕಿಯ ಜ್ವಾಲೆಯನ್ನು ಮಹೋನ್ನತೆಯನ್ನು ಸಾಧಿಸಲು ಅವಕಾಶವೀಯುವ ಸವಾಲುಗಳೆಂದು ಮೇರಿ ಪರಿಗಣಿಸಿದ್ದರು. ಮನೆಯ ಆರ್ಥಿಕ ಪರಿಸ್ಥಿತಿ ದುಃಸ್ಥಿತಿಯಲ್ಲಿತ್ತು. ಟೈಪಸ್ ಜ್ವರದಿಂದ ಅಕ್ಕ 'ಜೋಸ್ಸೈ' ತೀರಿಕೊಂಡಳು. ಚಿಕಿತ್ಸೆಗೆ ಹಣವಿಲ್ಲದೆ ತಾಯಿಯೂ ತೀರಿಕೊಂಡರು. ಉನ್ನತ ವ್ಯಾಸಂಗಕ್ಕಾಗಿ ಕನಸು ಕಂಡಿದ್ದ ಮೇರಿಯ ಕನಸು ನನಸಾಗಿಯೇ ಉಳಿಯಿತು.



**ಮೇಡಂ ಕ್ಯೂರಿ**
**ನಮ್ಮ ಸ್ಫೂರ್ತಿಯಾಗಲಿ**

**ವಿಕಿರಣಕ್ಕೆ ಸತತ ಒಡ್ಡಿಕೊಂಡಿದ್ದರಿಂದ ಅವರ ಆರೋಗ್ಯ ಹದಗೆಟ್ಟು 1934, ಜೂನ್ 4 ರಂದು ಮರಣಹೊಂದಿದರು. ಸಮಾಜದ ಮುನ್ನಡೆಯನ್ನು ಅಪೇಕ್ಷಿಸುವ ಮಹಿಳೆಯರಿಗೆ ಮೇರಿ ಕ್ಯೂರಿಯ ನೆನಪು ಉತ್ಸಾಹವನ್ನೂ ಲವಲವಿಕೆಯನ್ನು ಹುಟ್ಟಿಸುತ್ತದೆ.**

**ಕ್ಯೂರಿಯ ಜೀವನ ಪಾಠದಿಂದ ಸ್ಫೂರ್ತಿ ಪಡೆದು ಸಮಾಜದ ಏಳಿಗಾಗಿ ಒಳಿತಿಗಾಗಿ ಮುಂದಿನ ಪೀಳಿಗೆಯ ಮಹಿಳಾ ವೃದ್ಧಿಗಾಗಿ, ಶಿಕ್ಷಕಿಯರ ಮೂಲಕ ಶಿಕ್ಷಣದ ಉಳಿತಿಗಾಗಿ ಶ್ರಮಿಸುವ ಸಂಕಲ್ಪ ಮಾಡೋಣ.**

ಅಕ್ಕ ಬ್ರೋನ್ಯಾ ವೈದ್ಯಳಾಗುವ ಬಯಕೆಯನ್ನು ತೀರಿಸುವ ಸಲುವಾಗಿ ಮೇರಿಯು ಝುಕಿಯಲ್ಲಿರುವ ಜ್ಯೊರೋಸ್ಕಿಯವ ಮನೆಯ ಮಕ್ಕಳಿಗೆ ಪಾಠ ಹೇಳಲು ಪ್ರಾರಂಭಿಸಿದಳು. ಬ್ರೋನ್ಯಾ ಓದಿದ ನಂತರ ಅವಳ ಸಹಾಯದಿಂದ ಮೇರಿಯ ಓದು ಮುಂದುವರಿಸುವುದು ಎಂದು ಅಕ್ಕನ ಮನ ಒಲಿಸಿದಳು.

ಮೇರಿ 17ನೇ ವಯಸ್ಸಿನಲ್ಲಿ ಅನೌಪಚಾರಿಕ ಭೌತಶಾಸ್ತ್ರ, ರಸಾಯನ ಶಾಸ್ತ್ರಗಳನ್ನು ಅಧ್ಯಯನ ಮಾಡಿದಳು. ಶಿಕ್ಷಣದ ಮೂಲಕ ಬಹುಮುಖ ಪ್ರತಿಭೆ. ಜೊರೋಸ್ಕಿ ಕುಟುಂಬದ ಹಿರಿಯ ಮಗ ಕ್ಯಾಸಮಿರ್ ರಜೆಗೆ ಬಂದಾಗ ಮೇರಿಯನ್ನು ಪ್ರೀತಿಸಿದನು. ಮನೆತನದ ಅಂತರ ಅಡ್ಡಿ ಬಂದಿತು. ಹೇಡಿ ಕ್ಯಾಸಮಿರ್ ಹಿಂದೆ ಸರಿದ. ಈ ಘಟನೆಯಿಂದ ಬಾಲಸಂಗಾತಿ ಏನನ್ನು ಅಪೇಕ್ಷಿಸಬೇಕೆಂಬ ಅರಿವು ಮೇರಿಯಲ್ಲಿ ಮೂಡಿತು. ಆದರೆ ಅವಳ ಮನಸ್ಸಿಗೆ ಬಹಳ ನೋವಾಯಿತು.

3 ವರ್ಷದಲ್ಲಿ ಅಕ್ಕ ಬ್ರೋನ್ಯಾ ವೈದ್ಯಳಾಗಿ ತನ್ನ ಕನಸು ನನಸಾಗಿಸಿಕೊಂಡು ಕ್ಯಾಸಿಮರ್ ಡ್ಲುಸ್ಕಿಯೊಡನೆ ವಿವಾಹವಾದಳು. ಅಕ್ಕನ ಆರ್ಥಿಕ ಪರಿಸ್ಥಿತಿ ಸುಧಾರಿಸಿತು. ಬಡ್ತಿಯಿಂದಾಗಿ ತಂದೆಯ ಆರ್ಥಿಕ ಸ್ಥಿತಿಯು ಸುಧಾರಿಸಿ ಉನ್ನತ ವ್ಯಾಸಂಗಕ್ಕಾಗಿ ಪ್ಯಾರಿಸ್‌ಗೆ ತೆರಳಿದಳು. ಪ್ಯಾರಿಸ್‌ನ ವಿಶ್ವವಿಖ್ಯಾತ ಸೋರ್ಬನ್ ವಿಶ್ವವಿದ್ಯಾಲಯದ ಮುಂದೆ ನಿಂತಾಗ ಅನಿರ್ವಚನೀಯ ಆನಂದ ತುಂಬಿ ಬಂತು.

ಪುಟ 9 ಕ್ಕೆ ➤

ಸ್ತ್ರೀಯರೆಲ್ಲರೂ ಜಗನ್ಮಯಿಯ ಅಂಶಗಳು. ಆದ ಕಾರಣ ಎಲ್ಲರೂ ಅವರನ್ನು ತಾಯಿಯಂತೆ ಭಾವಿಸಬೇಕು.

➢ ಪುಟ 8 ರಿಂದ..... **ಸ್ಫೂರ್ತಿಯ ಸೆಲೆ**

ಸೋರ್ಬನ್ನಿನ ಅಷ್ಟಕೋನಾಕೃತಿಯ ಉಪನ್ಯಾಸ ಮಂದಿರದಲ್ಲಿ ನಿಗದಿತ ಅವಧಿಗೆ ಮುಂಚೆ ಮೊದಲ ಸಾಲಿನಲ್ಲಿ ಹಾಜರಿರುತ್ತಿದ್ದಳು. ಶ್ರೇಷ್ಠ ಅಧ್ಯಾಪಕರಾದ ಪಾಲ್‌ಅಪೆಲ್ ವಿಶ್ವ ನಿಯಮ ಕುರಿತು ಉಪನ್ಯಾಸ ಮಾಡುತ್ತಿದ್ದರು. ಗ್ರಹ, ನಕ್ಷತ್ರ ಇತರ ಆಕಾಶ ಕಾಯಗಳ ಕುರಿತು ರೋಮಾಂಚನಕಾರಿಯಾಗಿ ವರ್ಣಿಸುತ್ತಿದ್ದರೆ ವಿದ್ಯಾರ್ಥಿಗಳು ಬೇರೆ ಲೋಕಕ್ಕೆ ಹೋಗುತ್ತಿದ್ದರು.

ಪೋಲ್ಯಾಂಡ್ ಮತ್ತು ಫ್ರಾನ್ಸ್‌ನ ವಿದ್ಯಾಭ್ಯಾಸ ಪದ್ಧತಿಗಳ ನಡುವಿನ ಅಂತರದಿಂದ ಬಹಳ ಕಷ್ಟಪಟ್ಟು ಮೇರಿ ವ್ಯಾಸಂಗ ಮಾಡಿದಳು. ಓದಲು ಅನುಕೂಲವಾಗಲೆಂದು ಚಿಕ್ಕಕೋಣೆ ಬಾಡಿಗೆಗೆ ಪಡೆದಳು. ವಿಪರೀತ ಚಳಿಯಿಂದಾಗಿ ಬೆಳಗಾಗುವುದನ್ನೇ ಎದುರು ನೋಡುತ್ತಾ ರಾತ್ರಿ ಕಳೆಯುತ್ತಿದ್ದಳು. ಮನೆಯಲ್ಲಿ ದೀಪದ ಎಣ್ಣೆಗೆ ದುಡ್ಡಿಲ್ಲದೆ ಕಾಲೇಜಿನ ಗ್ರಂಥಾಲಯದಲ್ಲಿ ರಾತ್ರಿ 11 ರವರೆಗೆ ಓದಿ ಮನೆಗೆ ಬರುತ್ತಿದ್ದಳು. ಕೇವಲ ಬಿಸ್ಕೇಟ್ ಬ್ರೆಡ್‌ನಲ್ಲಿಯೇ ವರ್ಷಗಟ್ಟಲೆ ಕಳೆದಿದ್ದಳು.

ಇವಳ ಆರೋಗ್ಯ ಸ್ಥಿತಿಯನ್ನು ನೋಡಿ ಅವಳ ಭಾವ ಬಂದು ಮನೆಗೆ ಕರೆದುಕೊಂಡು ಹೋದರು. ಆರೋಗ್ಯ ಸುಧಾರಿಸಿದ ತಿಂಗಳ ಒಳಗೆ ಪುನಃ ತನ್ನ ಅಧ್ಯಯನ ಪ್ರಪಂಚಕ್ಕೆ ಮರಳಿದಳು.

1893ರಲ್ಲಿ ಭೌತಶಾಸ್ತ್ರದ ಮೊದಲಿಗಳಾಗಿ 1894ರಲ್ಲಿ ಗಣಿತ ಶಾಸ್ತ್ರದಲ್ಲಿ 2ನೇ ಸ್ಥಾನದಲ್ಲಿ ತೇರ್ಗಡೆಯಾದಳು. ಫ್ರಾನ್ಸಿನ ಕೈಗಾರಿಕಾ ಅಭಿವೃದ್ಧಿ ಸಮಿತಿಯವರು ಬೇರೆ ಬೇರೆ ಬಗೆಯ ಅಯಸ್ಕಾಂತ ಶಕ್ತಿ ಹಾಗೂ ಗುಣಗಳನ್ನು ಕಂಡುಹಿಡಿಯುವ ಹೊಣೆಯನ್ನು ಮೇರಿಗೆ ಹೊರಿಸಿದರು. 1895ರಲ್ಲಿ ಪಿಯರಿಯವನರ ಪರಿಚಯ.

ಹೆನ್ರಿ ಬೆಕೆರಲ್ ವಿಜ್ಞಾನಿ– ಯುರೋನಿಯಂ ಧಾತುವಿನ ಸಂಯುಕ್ತಗಳು ಬೆಳಕಿನ ಸಂಪರ್ಕವಿಲ್ಲದೆ. ತಮ್ಮಷ್ಟಕ್ಕೆ ತಾವೆ ಬೆಳಕಿನ ಕಿರಣಗಳನ್ನು ಹೊರಸೂಸುತ್ತದೆಂದು ಕಂಡು ಹಿಡಿದನು. ಆದರೆ ಅದರ ಕುರಿತಾದ ತಿಳುವಳಿಕೆ ಕತ್ತಲಲ್ಲೇ ಉಳಿಯಿತು.

ಈ ಬೆಳಕಿನ ಮೇಲೆ ಬೆಳಕು ಸೂಸುವ ಸವಾಲನ್ನು ಸಂಶೋಧನೆಯಾಗಿ ಮೇರಿ ಪ್ರಾರಂಭಿಸಿದರು.

ಭೌತಶಾಸ್ತ್ರದ ಶಾಲೆಯೊಂದರ ಕೆಳಗಿನ ಅಂತಸ್ತಿನಲ್ಲಿದ್ದ ಉಗ್ರಾಣದಲ್ಲಿ, ಜೇಡಗಳ, ಯಂತ್ರಗಳು ತುಂಬಿದ್ದ ಕಡೆ ಸಂಶೋಧನೆ ಆರಂಭವಾಯಿತು. ವಿಕಿರಣ ಶಕ್ತಿ ಇರುವ ಥೋರಿಯಂ ಮತ್ತು ಯುರೇನಿಯಂ ಖನಿಜಗಳ ವಿಕಿರಣತೆಯನ್ನು ಅಳತೆ ಮಾಡಿ ಎರಡರ ಒಟ್ಟು ಶಕ್ತಿಯನ್ನು ಅಳೆದರು. ಒಟ್ಟುಶಕ್ತಿಗಿಂತ ವಿಕಿರಣದ ಶಕ್ತಿ ಹೇಗೆ ಬಂದಿತೆಂದು ಪರೀಕ್ಷಿಸಿದರು.

ಒಬ್ಬ ವಿಜ್ಞಾನಿಗೆ ಇರಬೇಕಾದ ತಾಳ್ಮೆ, ಶೋಧಕಶಕ್ತಿ ಇಲ್ಲದಿದ್ದರೆ ಮೇಲಿನ ಪ್ರಶ್ನೆಗೆ ಉತ್ತರ ಸಿಗುತ್ತಿರಲಿಲ್ಲ. ಆದರೆ ಮೇರಿಯಲ್ಲಿದ್ದ ಅಪಾರ ತಾಳ್ಮೆ, ಸತ್ಯಾನ್ವೇಷಣೆ, ಅಚಲ ಚಲದ ಫಲ ಥೋರಿಯಂ ಹಾಗೂ ಯುರೇನಿಯಂಗಿಂತ ಭಿನ್ನವಾದ ಮತ್ತೊಂದು ಬೆಳಕು ಸೂಸುವ ವಿಕಿರಣವಿರಬೇಕೆಂದು ಈಕೆ ಇತರ ವಿಜ್ಞಾನಿಗಳಿಗೆ ತಿಳಿಸಿದರು. ಇತರರು ನಂಬಲಿಲ್ಲ. ಸಂಶೋಧನೆ ಮುಂದುವರಿಸಿ ನೂತನ ಧಾತುವನ್ನು ಸಾಬೀತು ಪಡಿಸಿ ಅವುಗಳ ಗುಣಲಕ್ಷಣ ಕಂಡು ಹಿಡಿಯಲು 4 ವರ್ಷಗಳೇ ಬೇಕಾಯಿತು. ಇದರ ಮಹತ್ವದ ಅರಿವಿಲ್ಲದ ವಿಶ್ವವಿದ್ಯಾನಿಲಯ ಅಥವಾ ಸರ್ಕಾರ ಯಾವುದೇ ಸಹಕಾರ ನೀಡಲಿಲ್ಲ.

ಪಿಚ್ ಬ್ಲೆಂಡ್ ಖರೀದಿಸಲು ಅವಳ ಬಳಿ ಹಣವಿಲ್ಲ. ಪಿಚ್ ಬ್ಲೆಂಡ್‌ನಿಂದ ಯುರೇನಿಯಂ ಅನ್ನು ತೆಗೆದು ಕಸದ ರಾಶಿಯನ್ನು ಕೊಡಲು ಆಸ್ಟ್ರೀಯ ಸರ್ಕಾರ ಒಪ್ಪಿದಾಗ ಮೇರಿ ಕ್ಯೂರಿ ದಂಪತಿಗಳಿಗೆ ಆನಂದವಾಯಿತು.

ಸ್ವಂತ ಹಣದಿಂದ ಟನ್‌ಗಟ್ಟಲೆ ಕಸವನ್ನು ತರಿಸಿಕೊಂಡು ಪೆಡಂಭೂತಗಳಂತ ಕಡಾಯಿಗಳಲ್ಲಿ ಪಿಚ್‌ಬ್ಲೆಂಡ್ ಕುದಿಸಿ ವಿಜ್ಞಾನ ಜಗತ್ತಿಗೆ ಮತ್ತೆರಡು ಧಾತುಗಳ ಆವಿಷ್ಕಾರವನ್ನು ಮಾಡಿದರು. ಹೊಸ ವಿಜ್ಞಾನಿಗಳಿಗೆ ಅಣು ವಿಜ್ಞಾನದ ಜಗತ್ತನ್ನೇ ಪರಿಚಯಿಸಿದರು.

ಎರಡು ಧಾತುಗಳಿಗೆ 4 ವರ್ಷಗಳ ಅವಿರತ ಶ್ರಮದಿಂದ ಮೇರಿ ತನ್ನ ತಾಯ್ನಾಡಿನ ನೆನಪಿಗಾಗಿ 'ಪೋಲೋನಿಯಂ' ಎಂದು ಇನ್ನೊಂದಕ್ಕೆ 'ರೇಡಿಯಂ' ಎಂದು ಹೆಸರಿಟ್ಟರು. ಇದೇ ವಿಜ್ಞಾನ ಕ್ಷೇತ್ರದಲ್ಲಿ ಹೊಸ ಸಂಶೋಧನೆಗೆ ನಾಂದಿಯಾಯಿತು. ಕ್ಯಾನ್ಸರ್ ಖಾಯಿಲೆಯನ್ನು ಗುಣಪಡಿಸುವಲ್ಲಿ ರೇಡಿಯಂ ನ ಪಾತ್ರ ಹಿರಿದು. ಇದರ ಹಿರಿಮೆ ಗರಿಮೆ ಮೇರಿಕ್ಯೂರಿ ದಂಪತಿಗಳಿಗೆ ಸಲ್ಲುತ್ತದೆ.

ಇದಕ್ಕಾಗಿ 1903ರಲ್ಲಿ ನೊಬೆಲ್ ಪ್ರಶಸ್ತಿ ಬಂದಿತು. ಮೊಟ್ಟಮೊದಲ ನೊಬೆಲ್ ಪ್ರಶಸ್ತಿ ಮೇರಿ ಕ್ಯೂರಿಯರದು. ವಿವಿಧ ರೀತಿಯ ಒತ್ತಡಗಳು ಪ್ರತಿಕೂಲಗಳ ನಡುವೆ ಪತಿ ಪಿಯರಿ ಕ್ಯೂರಿಯು ಸಾವು ಒಂದು ದೊಡ್ಡ ಆಘಾತ. ತಮ್ಮ ಸಂಶೋಧನೆಯನ್ನು ಬಿಡದೆ ಸಾಯುವ ಸಮಯದಲ್ಲೂ ವಿಜ್ಞಾನದ ಬಗ್ಗೆ ಯೋಚಿಸುತ್ತಾ ಜೀವತ್ಯಾಗ ಮಾಡಿದ ಮಹಿಳೆ.

ಪೋಲ್ಯಾಂಡ್‌ನ ಮಗು ಮೇನ್ಯಾ, ಫ್ರಾನ್ಸಿನ ಮೇರಿಕ್ಯೂರಿಯಾಗಿ ವಿಶ್ವ ವಿಖ್ಯಾತಳಾದಳು.

ಮನುಕುಲದ ಏಳಿಗೆಯನ್ನು ಗಮನದಲ್ಲಿಟ್ಟುಕೊಂಡು ಸ್ವಾರ್ಥ, ಸಣ್ಣತನಗಳನ್ನು ತೊರೆದು ಜ್ಞಾನ ಪ್ರಪಂಚಕ್ಕೆ ಧುಮುಕಿ ಮಾನವ ತಿಳುವಳಿಕೆಯ ಕ್ಷಿತಿಜಗಳನ್ನು ವಿಸ್ತರಿಸಿ ಜನತೆ ಸುಖ–ದುಃಖಗಳಿಗೆ ಸ್ಪಂದಿಸಿದ ಮಹಾನ್ ವಿಜ್ಞಾನಿಗಳಲ್ಲಿ ಈಕೆಯೂ ಒಬ್ಬಳು. ಇದಕ್ಕೆ ಮೇರಿಕ್ಯೂರಿಯ ಜೀವನವೇ ಸಾಕ್ಷಿ.

ಝಾರನ ಕ್ರೂರ ಆಡಳಿತದಲ್ಲಿ ಬಾಲ್ಯದಲ್ಲಿ ಮೇರಿ ಕಲಿಯುತ್ತಿದ್ದ ಶಾಲೆಯಲ್ಲಿ ಮಾತೃಭಾಷೆ ಬೋಧಿಸುವಿಕೆಯ ವಿರೋಧವಿತ್ತು. ಈ ದೌರ್ಜನ್ಯಕ್ಕೆ ಕಾರಣರಾದ ಪರಕೀಯರ


ಪುಟ 14 ಕ್ಕೆ ➢

# ಏ ಮೇರೆ ವತನ್ ಕೇ ಲೋಗೋ ಜರ ಯಾದ್ ಕರೋ ಖುರ್ಬಾನಿ

ಜನವರಿ 26ರಂದು ನಾವು 65 ನೇ ಗಣರಾಜ್ಯೋತ್ಸವವನ್ನು ಆಚರಿಸಿಕೊಂಡೆವು. ನೂರಾರು ವರ್ಷಗಳ ದಾಸ್ಯ ಸಂಕೋಲೆಯಿಂದ ಭಾರತ ಬಿಡುಗಡೆ ಸ್ವತಂತ್ರ ಸಾರ್ವಭೌಮ ರಾಷ್ಟ್ರವಾಗಿದ್ದಕ್ಕಾಗಿ ಮಾತ್ರ ಇದು ಸಾಧ್ಯವಾಯಿತು. ನಾವಿಂದು ಸ್ವಾತಂತ್ರ್ಯದ ಗಾಳಿಯನ್ನು ಉಸಿರಾಡಿ ನೆಮ್ಮದಿಯ ಜೀವನವನ್ನು ನಡೆಸುತ್ತಿದ್ದೇವೆ ಎಂದಾದರೆ ಅದರ ಹಿಂದೆ ನಾಡಿನ ಭವಿಷ್ಯಕ್ಕಾಗಿ ತಮ್ಮ ಬದುಕನ್ನೇ ಅರ್ಪಿಸಿದ ಸಹಸ್ರಾರು ಹುತಾತ್ಮರ ಬಲಿದಾನವಿದೆ. ಬೆವರು, ರಕ್ತಗಳ ಓಕಳಿ ಹರಿಸಿದ ಆ ಸ್ವಾತಂತ್ರ್ಯ ಸಮರ ಸೇನಾನಿಗಳನ್ನು ಹಾಗೂ ಇಂದಿಗೂ ನಾಡಿನ ಗಡಿಭಾಗದಲ್ಲಿ ಶತ್ರುವಿನ ಗುಂಡಿಗೆ ಎದೆಯೊಡ್ಡುತ್ತಾ ಹಗಲು ರಾತ್ರಿಗಳನ್ನು ಒಂದು ಮಾಡಿ ದೇಶದ ರಕ್ಷಣೆಯಲ್ಲಿ ಕರ್ತವ್ಯನಿರತರಾಗಿರುವ ವೀರಯೋಧರ ತ್ಯಾಗದಿಂದಾಗಿ ಭಾರತ ಸಮೃದ್ಧಿಯ ಹಾದಿಯಲ್ಲಿ ಮುನ್ನಡೆಯಲು ಸಾಧ್ಯವಾಗಿದೆ. ಭಾರತಮಾತೆಯ ಸೇವೆಯಲ್ಲಿ ಹುತಾತ್ಮರಾದ, ಆಗುತ್ತಿರುವ ಮಹನೀಯರ ಸ್ಮರಣೆ ಮಾಡುವುದು ನಮ್ಮ ಮಕ್ಕಳಿಗೆ ಪರಿಚಯಿಸಿದಾಗ ಅವರು ಈ ನಾಡಿಗಾಗಿ ಬದುಕಿ ಬಾಳುವ ಸಂಕಲ್ಪ ಮಾಡಿದರೆ ಅವರಿಗೆ ಪ್ರೇರಣೆ ನೀಡಿದ್ದಕ್ಕಾಗಿ ನಮ್ಮ ವೃತ್ತಿ ಜೀವನ ಸಾರ್ಥಕವಾದೀತು.

# ವಾಸುದೇವ ಬಲವಂತ ಫಡಕೆ (1845–1883)

ಬ್ರಿಟಿಷರನ್ನು ಸಶಸ್ತ್ರ ಕ್ರಾಂತಿಯ ಮೂಲಕ ಹೊರಗಟ್ಟಬೇಕೆಂದು ಪಣತೊಟ್ಟ ಪ್ರಪ್ರಥಮ ಕ್ರಾಂತಿಕಾರಿ, ಕ್ರಾಂತಿಭೀಷ್ಮ ಯಾರು ಎಂಬ ರಸ ಪ್ರಶ್ನೆಯನ್ನು ಯಾರಾದರೂ ಕೇಳಿದರೆ ಅದಕ್ಕೆ ಸರಿಯುತ್ತರ 'ವಾಸುದೇವ ಬಲವಂತ ಫಡಕೆ.



ಮಹಾರಾಷ್ಟ್ರ ರಾಯಗಢ ಜಿಲ್ಲೆಯ ಪನ್ವೇಲ್ ತಾಲ್ಲೂಕಿನಲ್ಲಿರುವ ಕುಗ್ರಾಮ 'ಶಿರೋಧಾನ್'ದಲ್ಲಿ. ಫಡಕೆ ಹುಟ್ಟಿದ್ದು 1845 ರ ನವೆಂಬರ್ 4 ರಂದು. ಬಾಲ್ಯದಲ್ಲಿಯೇ, ಗರಡಿ ಮನೆಗೆ ಹೋಗಿ ಕುಸ್ತಿ, ಮಲ್ಲಕಂಭ ದಂಥ ಶಾರೀರಿಕ ಚಟುವಟಿಕೆಗಳಲ್ಲಿ ಭಾಗವಹಿಸಿ ದಷ್ಟ ಪುಷ್ಟ ಶರೀರ ಬೆಳೆಸಿಕೊಂಡನು. ಹೆಚ್ಚು ಕಲಿಯದ ಫಡಕೆ ಪುಣೆ ನಗರ ಸೇರಿ ಮಿಲಿಟರಿ ಅಕೌಂಟ್ಸ್ ಇಲಾಖೆಯಲ್ಲಿ ಗುಮಾಸ್ತನಾಗಿ 15 ವರ್ಷ ಕೆಲಸಮಾಡಿದ. ಆ ಸಮಯದಲ್ಲೇ ಅವನು ಅಂದಿನ ಖ್ಯಾತ ಸಾಮಾಜಿಕ ಕಾರ್ಯಕರ್ತ ಕ್ರಾಂತಿವೀರ ಲಾಹೂಜಿ ವಸ್ತಾದ್ ಸಾಳ್ವೆಯವರ ನಿಕಟ ಸಂಪರ್ಕಕ್ಕೆ ಬಂದದ್ದು. ಸಾಳ್ವೆ ಅವನಿಗೆ ಕೇವಲ ಕುಸ್ತಿ ತರಬೇತಿ ನೀಡಿದ್ದಲ್ಲದೆ, ಬ್ರಿಟಿಷರಿಂದ ಸ್ವರಾಜ್ಯವನ್ನು ಪಡೆಯಲು ಹೋರಾಡುವಂತೆ ಪ್ರೇರಿಸಿದರು. ಮಾಂಗ್ ಎಂಬ ಅಸ್ಪೃಶ್ಯ ಜನಾಂಗಕ್ಕೆ ಸೇರಿದ ಸಾಳ್ವೆ, ಚಿತ್‌ಪಾವನ ಬ್ರಾಹ್ಮಣ ಸಮುದಾಯಕ್ಕೆ ಸೇರಿದ ಫಡಕೆಗೆ, ಸ್ವಾತಂತ್ರ್ಯ ಹೋರಾಟಕ್ಕೆ ಹಿಂದುಳಿದ ಜನಾಂಗಗಳ ಯುವಕರನ್ನು ಸಿದ್ಧಗೊಳಿಸುವಂತೆ ಪ್ರೇರಣೆ ನೀಡಿದರು. ಆ ಸಮಯದಲ್ಲೇ ಫಡಕೆ ಶ್ರೀಮಹಾದೇವ ಗೋವಿಂದ ರಾನಡೆಯವರ ಭಾಷಣಗಳಿಂದ ಪ್ರೇರಿತವಾಗಿ, 'ಐಕ್ಯವರ್ಧಿನಿ ಸಭಾ' ಎಂಬ ಸಂಸ್ಥೆಯನ್ನು ಹುಟ್ಟುಹಾಕಿ ತರುಣರನ್ನು ಸಂಘಟಿಸತೊಡಗಿದ.

1860ರಲ್ಲಿ ತನ್ನ ಗೆಳೆಯರೊಡಗೂಡಿ ಮಹಾರಾಷ್ಟ್ರ ಎಜುಕೇಷನ್ ಸೊಸೈಟಿ ಎಂಬ ಶಿಕ್ಷಣ ಸಂಸ್ಥೆಯನ್ನು ಕಟ್ಟಿ ಬೆಳಸಿದ. ಇಂದು ಅದರ ಅಡಿಯಲ್ಲಿ 51 ಶಾಲಾಕಾಲೇಜುಗಳು ಕೆಲಸ ಮಾಡುತ್ತಿವೆ.

ಸೇನಾ ಲೆಕ್ಕ ವಿಭಾಗದಲ್ಲಿ ಕೆಲಸಮಾಡುತ್ತಿದ್ದಾಗಲೇ ಕಾಯಿಲೆಯಿಂದ ನರಳುತ್ತಿದ್ದ ತಾಯಿಯನ್ನು ಕಾಣಲು ರಜೆ ಕೇಳಿದರೆ, ಅವನ ಮೇಲಧಿಕಾರಿ ರಜೆ ನಿರಾಕರಿಸಿದ. ತಾಯಿಯ ಮೃತದೇಹವನ್ನು ಕಾಣಲಾಗದ ಈ ಘಟನೆ ಅವನ ಜೀವನದ ದಿಕ್ಕನ್ನೇ ಬದಲಿಸಿತು. 'ನನ್ನ ಹೆತ್ತ ತಾಯಿಯ ಮೃತ್ಯುವನ್ನೇ ನನಗೆ ಸಹಿಸಲಾಗುತ್ತಿಲ್ಲ. ಆದರೆ ನನ್ನಂಥ ಕೋಟ್ಯಾಂತರ ಜನರ ತಾಯಿ ಭಾರತಮಾತೆ ಬ್ರಿಟಿಷರ ದೌರ್ಜನ್ಯಕ್ಕೆ ಸಿಕ್ಕಿ ನರಳುತ್ತಿರುವಳಲ್ಲ, ಅವಳ ಯೋಗಕ್ಷೇಮ ನೋಡುವುದು ನನ್ನ ಕರ್ತವ್ಯವಲ್ಲವೇ' ಎಂದು ಚಿಂತಿಸಿ ತನ್ನ ವೃತ್ತಿಗೆ ರಾಜೀನಾಮೆ ನೀಡಿ 1875 ರಲ್ಲಿ ಡೆಕ್ಕನ್ ಪ್ರಾಂತದ ಉದ್ದಗಲಕ್ಕೂ ಸಂಚರಿಸಿ ಜನಜಾಗೃತಿಗೆ ಶ್ರಮಿಸಿದ. ಆದರೆ ಶಿಕ್ಷಿತ ತರುಣರಿಂದ ಅವನಿಗೆ ಬೇಕಾದ ಬೆಂಬಲ ಸಿಗಲಿಲ್ಲ. ಆಗ ತನ್ನ ಗುರು ಸಾಳ್ವೆ ಹೇಳಿದ ಮಾತು ನೆನಪಾಗಿ ರಾಮೋಶಿ, ಭಿಲ್ಲ, ಕೋಲಿ, ಧಾಂಗರ್ ಮುಂತಾದ ಹಿಂದುಳಿದ ಜಾತಿಯವರನ್ನು ಸಂಘಟಿಸಿ ಒಂದು ಸೈನ್ಯ ಕಟ್ಟಿ ಸಶಸ್ತ್ರ ಕ್ರಾಂತಿಯ ಕಹಳೆಯೂದಿದ. 300 ಜನ ಸೈನಿಕರಿದ್ದ ಅವನ ಸೈನ್ಯವನ್ನು ಸಾಕಲು ಬ್ರಿಟಿಷರ ಟ್ರೆಜರಿಯನ್ನು ಲೂಟಿ ಮಾಡುತ್ತಿದ್ದ. ಆ ಹಣದಿಂದ ಭೀಕರ ಬರಗಾಲಕ್ಕೆ ಒಳಗಾಗಿದ್ದ ಹಳ್ಳಿಗಳ ಜನರಿಗೆ ನೆರವು ನೀಡುತ್ತಿದ್ದ. ಹಳ್ಳಿಗರೆಲ್ಲಾ ಅವನಿಗೆ ಸದಾ ರಕ್ಷಣೆ ಒದಗಿಸುತ್ತಿದ್ದರು.

ಪುಟ 14 ಕ್ಕೆ ➤

ಸಂಘದ ವಾರ್ತೆ

# ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘದ ಸಭೆ – ಕಾಟ್ರಾ... ಕಿರುನೋಟ

ದಿನಾಂಕ 30.01.2015 ರಿಂದ 01.02.2015ರ ವರೆಗೆ 3 ದಿನಗಳ ಎ.ಬಿ.ಆರ್.ಎಸ್.ಎಂ. ನ ತ್ರೈಮಾಸಿಕ ಸಭೆಯು ಕಾಟ್ರಾದಲ್ಲಿ ವೈಷ್ಣೋದೇವಿ ಆಧ್ಯಾತ್ಮ ಕೇಂದ್ರದ ಸಭಾಂಗಣದಲ್ಲಿ ನಡೆಯಿತು.

22 ರಾಜ್ಯಗಳಿಂದ ಶಿಕ್ಷಕ ಪ್ರತಿನಿಧಿಗಳು ಭಾಗವಹಿಸಿದ್ದರು. ಶ್ರೀ ಭೂಷಣ್ ಶರ್ಮರವರು ಸ್ವಾಗತವನ್ನು ಕೋರಿದರು. ಜಮ್ಮು ರಾಜ್ಯದ ಎಂ.ಎಲ್.ಎ ಅಜಯ್ ನಂದರವರು ದ್ವೀಪಪ್ರಜ್ವಲನ ಮಾಡಿ, ಗುರುವಿನ ಮಹತ್ವದ ಬಗ್ಗೆ ತಿಳಿಸಿ, ತಮ್ಮ ರಾಜ್ಯದಲ್ಲಿ ಈ ಸಭೆ ನಡೆಯುತ್ತಿರುವುದಕ್ಕೆ ಸಂತೋಷ ವ್ಯಕ್ತಪಡಿಸಿದರು. ಹಾಗೆಯೇ ಶಿಕ್ಷಕರನ್ನು ಅಭಿನಂದಿಸಿದರು.

ಎ.ಬಿ.ಆರ್.ಎಸ್.ಎಂ. ನ ಪ್ರಧಾನ ಕಾರ್ಯದರ್ಶಿ ಜೆ.ಪಿ ಸಿಂಗಲ್ ರವರು ರಾಷ್ಟ್ರೀಯ ಚಿಂತನೆಯಿಂದ ಕೆಲಸ ಮಾಡುತ್ತಿರುವ ಶಿಕ್ಷಕ ಸಂಘದ ಧ್ಯೇಯೋದ್ದೇಶವನ್ನು ತಿಳಿಸಿದರು. ಸಂಕಲ್ಪದಿನ, ಗುರುವಂದನ ಮುಂತಾಗಿ ಶಿಕ್ಷಕರನ್ನು ವ್ಯಕ್ತಿನಿರ್ಮಾಣ ಕಾರ್ಯದಲ್ಲಿ ತೊಡಗಿಸುವ ಕಾರ್ಯಕ್ರಮಗಳನ್ನು ಇಡೀ ದೇಶದಲ್ಲಿ ಆಚರಿಸುತ್ತಿದೆ. ಕೇಂದ್ರ ಶಾಸನದ ಮೂಲಕ ಇತರ ರಾಜ್ಯಗಳ ಶಾಸನಗಳಲ್ಲಿ ಬದಲಾವಣೆ ತರಲು ಎ.ಬಿ.ಆರ್.ಎಸ್.ಎಂ. ಕೆಲಸ ಮಾಡುತ್ತಿದೆ. ಈಗ ಕೊಡುತ್ತಿರುವುದು ಮಾಹಿತಿ. ಶಿಕ್ಷಣ ಆಯೋಗ ರಚಿಸಿ, ಶಿಕ್ಷಣದ ಸ್ವರೂಪ ಬದಲಾಯಿಸುವ ಪ್ರಯತ್ನ ಎ.ಬಿ.ಆರ್.ಎಸ್.ಎಂ ಮಾಡಲು ಪ್ರಯತ್ನಿಸುತ್ತದೆ ಎಂದು ತಿಳಿಸಿದರು. ದೇಶದಲ್ಲಿ ನಡೆಯುತ್ತಿರುವ ಭ್ರಷ್ಟಾಚಾರ, ಅತ್ಯಾಚಾರ ಸ್ತ್ರೀ ಭ್ರೂಣ ಹತ್ಯೆ, ಮುಂತಾದ ಸಾಮಾಜಿಕ ಕ್ರೂರತೆಗೆ ಸಮಾಜದಲ್ಲಿ ಮೌಲ್ಯಗಳ ಕೊರತೆಯೇ ಕಾರಣ. ಇದಕ್ಕಾಗಿ ಶಿಕ್ಷಕ ಸಂಘವು ಇಡೀ ಸಮಾಜದಲ್ಲಿ ಶಾಶ್ವತ ಜೀವನ ಮೌಲ್ಯಗಳನ್ನು ಬೆಳೆಸುವ ದೃಷ್ಟಿಯಿಂದ ಶಿಕ್ಷಕರು, ಪೋಷಕರು, ವಿದ್ಯಾರ್ಥಿಗಳನ್ನು ಸೇರಿಸಿ ಚರ್ಚೆ, ಸೆಮಿನಾರ್‌ಗಳ ಮೂಲಕ ಜಾಗೃತಿಯನ್ನುಂಟುಮಾಡುವ ಕಾರ್ಯವನ್ನು ಕೈಗೆತ್ತಿಕೊಂಡು ಈಗಾಗಲೇ ನೂರಾರು ಕಾರ್ಯಕ್ರಮಗಳನ್ನು ಆಯೋಜಿಸಿದೆ. ಒಂದು ಶಿಕ್ಷಕ ಸಂಘಟನೆಯಾಗಿ ಈ ಕೆಲಸವನ್ನು ಮಾಡುತ್ತಿರುವುದಕ್ಕೆ ಮಾಧ್ಯಮಗಳು, ಸಮಾಜದ ಮುಖಂಡರು ನಮ್ಮ ಸಂಘವನ್ನು ಮುಕ್ತವಾಗಿ ಶ್ಲಾಘಿಸಿದ್ದಾರೆ ಎಂದೂ ಹೇಳಿದರು. ರಾಷ್ಟ್ರೀಯ ಜಂಟಿ ಕಾರ್ಯದರ್ಶಿ ಶ್ರೀ ಕೆ.ಬಾಲಕೃಷ್ಣಭಟ್‌ರವರು ಸಭೆಗೆ ವಂದಿಸಿದರು.

**ವರದಿ: ಶ್ರೀಮತಿ ಆರ್.ಸೀತಾಲಕ್ಷ್ಮಿ**
ಮಹಿಳಾ ವಿಭಾಗ ಕಾರ್ಯದರ್ಶಿ, ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾ ಸಂಘ

# ಸಂಕಲ್ಪ ದಿನಾಚರಣೆ – ಕುಷ್ಟಗಿ

ದಿನಾಂಕ 12–1–2015ರಂದು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಕುಷ್ಠಗಿ ಜಿಲ್ಲಾ ಘಟಕವು, ಬಾಲಕರ ಪದವಿ ಪೂರ್ವ ಕಾಲೇಜು ಇವರ ಜೊತೆಗೂಡಿ ಸಂಕಲ್ಪ ದಿನವನ್ನು ಆಚರಿಸಿತು. ವಕೀಲ ರವಿಚಂದ್ರಾರವರು ಕಾರ್ಯಕ್ರಮದ ಬಗ್ಗೆ ಮಾತನಾಡುತ್ತಾ ವಿವೇಕಾನಂದ ಹಾಗೂ ನೇತಾಜಿಯವರ ರಾಷ್ಟ್ರಪ್ರೇಮದಿಂದ ಪ್ರೇರಿತರಾಗಿ ನಾವು ರಾಷ್ಟ್ರ ಪುನರ್ ನಿರ್ಮಾಣ ಕಾರ್ಯದಲ್ಲಿ ಪಾಲ್ಗೊಳ್ಳೋಣ ಎಂದರು. ಜಿಲ್ಲಾ ಸಂಚಾಲಕರಾದ ಅರವಿಂದ ದೇಸಾಯಿಯವರು ಸಂಕಲ್ಪ ಬೋಧನೆಯನ್ನು ಮಾಡಿ ಅದರ ಮಹತ್ವವನ್ನು ತಿಳಿಸಿದರು. ಶ್ರೀ ನವೀನ ಕುಮಾರ್‌ರವರು ಕಾರ್ಯಕ್ರಮವನ್ನು ನಿರೂಪಿಸಿದರು.

**ವರದಿ: ಅರವಿಂದ ಕುಮಾರ್ ಎಸ್.ದೇಸಾಯಿ**

# ಸಂಕಲ್ಪ ದಿನಾಚರಣೆ

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ, ಬೆಂಗಳೂರು ಉತ್ತರ ಜಿಲ್ಲಾ ಘಟಕ ದಿನಾಂಕ: 23.1.2015 ರಂದು ಭದ್ರಪ್ಪ ಲೇಔಟ್ ನ ಶಾಂತಿನಿಕೇತನ ಶಾಲೆಯಲ್ಲಿ ಸಂಕಲ್ಪ ದಿನವನ್ನು ಏರ್ಪಡಿಸಿದ್ದರು.

**ಪುಟ 12 ಕ್ಕೆ ➤**

➢ ಪುಟ 11 ರಿಂದ.....

ಸಂಘದ ವಾರ್ತೆ

ಅಖಿಲ ಭಾರತ ಶೈಕ್ಷಿಕ ಮಹಾಸಂಘ, ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಮಹಾಪೋಷಕರಾದ ಮಾನ್ಯ ಕೃ.ನರಹರಿಯವರು ಸಂಕಲ್ಪ ಬೋಧಿಸಿ, ಸಂಕಲ್ಪದ ಮಹತ್ವವನ್ನು ವಿವರಿಸಿದರು. ಬೆಂಗಳೂರು ದಕ್ಷಿಣ ಜಿಲ್ಲಾ ಘಟಕದ ಅಧ್ಯಕ್ಷರಾದ ವಿ.ರಾಜುರವರು ವಿವೇಕಾನಂದರ ಸಂಕಲ್ಪದ ಶಕ್ತಿ ಸಂಕೇತವಾಗಿ ಅಮೇರಿಕಾ ಮತ್ತು ಯುರೋಪ್ ದೇಶಗಳಲ್ಲಿ ಯಶಸ್ವಿ ಪ್ರವಾಸ ಮಾಡಿ ಭಾರತದ ಬಗ್ಗೆ ಅಲ್ಲಿಯ ಜನರಿಗಿದ್ದ ಕೀಳರಿಮೆಯನ್ನು ಕಿತ್ತೊಗೆದು ಭಾರತದ ಹಿರಿಮೆಯನ್ನು ಕೊಂಡಾಡುವಂತೆ ಮಾಡಿದರು. ಇಂತಹ ಮಹಾನ್ ವ್ಯಕ್ತಿಗಳಿಂದ ಸ್ಫೂರ್ತಿ ಪಡೆದು ನಾವೂ, ನಮ್ಮ ವಿದ್ಯಾರ್ಥಿಗಳು ರಾಷ್ಟ್ರ ಪ್ರೇಮ, ರಾಷ್ಟ್ರಭಕ್ತಿಯನ್ನು ವೃದ್ಧಿಸೋಣ ಎಂದರು.

ಶಾಂತಿನಿಕೇತನ ಶಾಲೆಯ ಕಾರ್ಯದರ್ಶಿಗಳಾದ ಶ್ರೀ ಬಿ.ನಾರಾಯಣಪ್ಪರವರು ಅಧ್ಯಕ್ಷೀಯ ಭಾಷಣ ಮಾಡುತ್ತಾ ಅವರ ಶಾಲೆಯಲ್ಲಿ ನಡೆಯುತ್ತಿರುವ ಇಂತಹ ಹೆಮ್ಮೆಯ ಕಾರ್ಯಕ್ರಮ ಅವರಿಗೆ ಸಂತೋಷ ತಂದಿರುವುದಾಗಿ ತಿಳಿಸಿದರು.

ಮಹಿಳಾ ಕಾರ್ಯಕರ್ತೆ ಶ್ರೀಮತಿ ಲತಾರವರ ಪ್ರಾರ್ಥನೆಯೊಂದಿಗೆ ಹಾಗೂ ಗಣ್ಯರಿಂದ ಜ್ಯೋತಿ ಬೆಳಗಿಸುವುದರ ಮೂಲಕ ಕಾರ್ಯಕ್ರಮ ಆರಂಭವಾಯಿತು. ಜಿಲ್ಲಾ ಕಾರ್ಯದರ್ಶಿಗಳಾದ ಎಸ್.ಜಿ ತಾಂಬೆಯವರ ಸ್ವಾಗತ ಮತ್ತು ಪರಿಚಯ ಹಾಗೂ ಜಿಲ್ಲಾ ಗೌರವಾಧ್ಯಕ್ಷರಾದ ಜೆ.ಎಂ ಜೋಶಿಯವರ ಪ್ರಾಸ್ತಾವಿಕ ನುಡಿಯೊಂದಿಗೆ ಕಾರ್ಯಕ್ರಮ ಪ್ರವಹಿಸಿ ಜಿಲ್ಲಾ ಕಾರ್ಯಕರ್ತರಾದ ಶ್ರೀ ನಾರಾಯಣ ಭಟ್‌ರವರ ವಂದನೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು. ಮತ್ತೋರ್ವ ಕಾರ್ಯಕರ್ತ ಸಿದ್ದೇಗೌಡರವರು ಕಾರ್ಯಕ್ರಮ ನಿರೂಪಿಸಿದರು.

**ವರದಿ: ಎಸ್.ಜಿ. ತಾಂಬೆ,**
ಜಿಲ್ಲಾ ಕಾಯದರ್ಶಿ, ಬೆಂಗಳೂರು ಉತ್ತರ ಜಿಲ್ಲೆ

# ಸಂಕಲ್ಪ ದಿನಾಚರಣೆ – ಕೊಪ್ಪಳ ಜಿಲ್ಲೆ

ತಮ್ಮ ಶಕ್ತಿಯುತ ವ್ಯಕ್ತಿತ್ವದ ಮೂಲಕ, ಪ್ರಭಾವಪೂರ್ಣ ವಾಗ್ಮಿತ್ವದ ಮೂಲಕ ಹಾಗೂ ಪ್ರಚೋದಕ ಬರಹಗಳ ಮೂಲಕ ನಮ್ಮ ರಾಷ್ಟ್ರ ಚೇತನವನ್ನು ಜಾಗೃತಗೋಳಿಸಿ ನಮ್ಮ ಸಂಸ್ಕೃತಿಯನ್ನು ವಿಶ್ವದೆತ್ತರಕ್ಕೆ ಏರಿಸಿದ ಕೀರ್ತಿ ಸಿಡಿಲ ಸನ್ಯಾಸಿ ಸ್ವಾಮಿ ವಿವೇಕಾನಂದರಿಗೆ ಸಲ್ಲುತ್ತದೆ ಎಂದು ಕೊಪ್ಪಳ ರಾಮಕೃಷ್ಣ ವಿವೇಕಾನಂದ ಆಶ್ರಮದ ಸ್ವಾಮಿ ಪರಮಪೂಜ್ಯ ಚೈತನ್ಯಾನಂದ ಸ್ವಾಮೀಜಿ ಹೇಳಿದರು.

ಅವರು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ (ರಿ) ಕೊಪ್ಪಳ ಜಿಲ್ಲಾ ಘಟಕವು ಯಲಬುರ್ಗಾದ ನಿಂಗೋಜಿ ಶಿಕ್ಷಣ ಮಹಾವಿದ್ಯಾಲಯದಲ್ಲಿ ಹಮ್ಮಿಕೊಂಡಿದ್ದ ಸ್ವಾಮೀ ವಿವೇಕಾನಂದ ಜಯಂತಿ ಹಾಗೂ ಸಂಕಲ್ಪ ದಿನಾಚರಣೆಯನ್ನು ಉದ್ಘಾಟಿಸಿ ಮಾತನಾಡಿದರು.

ಇಂದಿನ ಯುವಕರಲ್ಲಿ ನವೋತ್ಸಾಹವನ್ನು ಕೆರಳಿಸಿ ಅವರಲ್ಲಿ ನಮ್ಮ ಸಂಸ್ಕೃತಿಯ ಬಗ್ಗೆ ಹೆಮ್ಮೆಯನ್ನು ಮೂಡಿಸಿ ನವ ಭಾರತದ ನಿರ್ಮಾಣಕ್ಕೆ ಭದ್ರ ಬುನಾದಿಯನ್ನು ಹಾಕಬೇಕೆಂದು ಅವರು ಶಿಕ್ಷಕರಲ್ಲಿ ಮನವಿ ಮಾಡಿದರು.

ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ರಾಜ್ಯ ಉಪಾಧ್ಯಕ್ಷರಾದ ಕೊಟ್ರಪ್ಪನವರು ಪ್ರಾಸ್ತಾವಿಕವಾಗಿ ಮಾತನಾಡಿ ಕರ್ನಾಟಕ ರಾಜ್ಯ ಮಾಧ್ಯಮಿಕ ಸಂಘ ನಡೆದು ಬಂದ ದಾರಿಯನ್ನು ವಿವರಿಸಿದರು.

ಇಂದಿನ ವಿದ್ಯಾರ್ಥಿಗಳಲ್ಲಿ ಶಿಕ್ಷಕ ಸಮುದಾಯ ಸ್ವಾಮಿ ವಿವೇಕಾನಂದರ ತತ್ವಾದರ್ಶಗಳನ್ನು ಸರಿಯಾಗಿ ತಿಳಿಸುವುದರ ಮೂಲಕ ಅವುಗಳನ್ನು ವಿದ್ಯಾರ್ಥಿಗಳು ಅಳವಡಿಸಿಕೊಳ್ಳುವ ಹಾಗೆ ಮಾಡಿದರೆ ಬಲಿಷ್ಠ ಭಾರತದ ನವ ನಿರ್ಮಾಣ ಆಗುವುದರಲ್ಲಿ ಸಂದೇಹವಿಲ್ಲ ಎಂದು ವಿಧಾನ ಪರಿಷತ್ ಮಾಜಿ ಸದಸ್ಯರು ಹಾಗೂ ಶಿಕ್ಷಕ ಸಂಘದ ವಿಶೇಷ ಆಹ್ವಾನಿತರಾದ ಶ್ರೀ ಶಶೀಲ ಜಿ.ನಮೋಶಿ ಹೇಳಿದರು. ಶಿಕ್ಷಕ ವೃತ್ತಿ ಪವಿತ್ರವಾದದು, ಸಧೃಡ ಸಮಾಜ ನಿರ್ಮಾಣ ವಾಗಬೇಕಾದರೆ ಶಿಕ್ಷಕರ ಪಾತ್ರ ಮಹತ್ವದಾಗಿದೆ. ಶಿಕ್ಷಣದಿಂದ ಏನನ್ನಾದರು ಸಾಧಿಸಲು ಸಾಧ್ಯ. ಉತ್ತಮ ಸ್ಥಾನ–ಮಾನ ಮತ್ತು ಉನ್ನತ ಹುದ್ದೆಯನ್ನು ಪಡೆಯಬಹುದು. ಯುವ ಜನಾಂಗ ಈ ರಾಷ್ಟ್ರದ ಅಮೂಲ್ಯ ಸಂಪತ್ತಾಗಿದ್ದು ಅವರನ್ನು ಸರಿದಾರಿಗೆ ತರುವುದು ಶಿಕ್ಷಕರ ಆದ್ಯ ಕರ್ತವ್ಯವಾಗಿದೆ. ಅದಕ್ಕಾಗಿ ಶಿಕ್ಷಕರು ಉತ್ತಮ ಸಮಾಜದ ನಿರ್ಮಾಣಕ್ಕೆ ಮುಂದಾಗಿ ಎಂದು ಕರೆ ಕೊಟ್ಟರು.

ಆದರ್ಶ ವ್ಯಕ್ತಿಗಳಾಗಿ ಶಾಂತಿ, ನೆಮ್ಮದಿಯಿಂದ ಸುಂದರ ಜೀವನ ರೂಪಿಸಿಕೊಳ್ಳಲು ಹಣ–ಅಂತಸ್ತು–ಶ್ರೀಮಂತಿಕೆ ಯಾವುದು ಬರುವುದಿಲ್ಲ. ಇದು ಶಿಕ್ಷಣದಿಂದ ಮಾತ್ರ ಸಾಧ್ಯ ಎಂದು ಯುವ ಮುಖಂಡ ನವೀನ ಗುಳಗಣ್ಣನವರ ಹೇಳಿದರು.

ಇದೇ ಸಂಧರ್ಭದಲ್ಲಿ ಸ್ವಾಮಿ ಚೈತನ್ಯಾನಂದ ಸ್ವಾಮಿಜಿ ಎಲ್ಲ ಶಿಕ್ಷಕ ಬಂಧು, ಬಗಿನಿಯರಿಗೆ ಸಂಕಲ್ಪವನ್ನು ಭೋದಿಸಿ ಉತ್ತಮನಾಗು–ಉಪಕಾರಿಯಾಗು ಎಂದು ವಿವೇಕ ಕಂಕಣವನ್ನು ಎಲ್ಲರಿಗೂ ತೊಡಸಿದರು.

ಈ ಸಂದರ್ಭದಲ್ಲಿ ಶೈಕ್ಷಣಿಕ ಕ್ಷೇತ್ರದಲ್ಲಿ ಸಾಧನೆಗೈದ ಅನೇಕ ಶಿಕ್ಷಕರನ್ನು ಗುರುತಿಸಿ ಜಿಲ್ಲಾ ಘಟಕ ಸನ್ಮಾನಿಸಿದ್ದು ವಿಶೇಷವಾಗಿತ್ತು.

ಪುಟ 13 ಕ್ಕೆ ➢

➢ ಪುಟ 12 ರಿಂದ..... ಸಂಘದ ವಾರ್ತೆ

ಈ ಸಂದರ್ಭದಲ್ಲಿ ಯಲಬುರ್ಗಾ ತಾಲುಕಿನ ನಿವೃತ್ತ ನೌಕರರ ಸಂಘದ ಶೇಖರಗೌಡ ಉಳ್ಳಾಗಡ್ಡಿ, ಮಾಧ್ಯಮಿಕ ಶಿಕ್ಷಕ ಸಂಘದ ಜಿಲ್ಲಾ ಅಧ್ಯಕ್ಷ ಸೋಮಶೇಖರ ಹರ್ತಿ, ಕಲಬುರಗಿ ಶೈಕ್ಷಣಿಕ ವಿಭಾಗ ಪ್ರಮುಖ ಬಸವರಾಜ ಮಾಸ್ತಿ, ಶಶಿಕಾಂತ ನಿಂಗೋಜಿ, ಹಾಗೂ ಕೊಪ್ಪಳ ಜಿಲ್ಲೆಯ ಸಂಘಟನಾ ಜವಾಬ್ದಾರಿಯ ಉಸ್ತುವಾರಿ ಈರನಗೌಡ ಕ. ಪಾಟೀಲ್ ಉಪಸ್ಥಿತರಿದ್ದರು.

ಕಾರ್ಯಕ್ರಮವನ್ನು ಶರಣಪ್ಪ ಕೊಪ್ಪದ್ ನಿರೂಪಿಸಿದರು, ಹೇಮಾದ್ರಿ ಸಹೋದರಿ ಪ್ರಾರ್ಥಿಸಿದರು, ಯಲಬುರ್ಗಾ ತಾಲುಕಾ ಅಧ್ಯಕ್ಷ ಶರಣಗೌಡ ಪೊಲೀಸ್ ಪಾಟೀಲ್ ಸ್ವಾಗತಿಸಿದರು, ಕಾರ್ಯದರ್ಶಿ ಕೃಷ್ಣಭಟ್ ವಂದಿಸಿದರು.

**ವರದಿ: ಶ್ರೀ ಐ.ಕೆ.ಪಾಟೀಲ್**

ಇತಿಹಾಸ ಉಪನ್ಯಾಸಕರು, ಎಮ್.ಎಸ್.ಐ.ಪದವಿ ಪೂರ್ವ ಕಾಲೇಜು, ಕಲಬುರಗಿ

## ಸರ್ಕಾರದ ಶಿಕ್ಷಕ ವಿರೋಧಿ ನೀತಿಗೆ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಖಂಡನೆ

ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಸಿಸಿ ಟಿವಿ ಕ್ಯಾಮರಾ ಅಳವಡಿಸದಿದ್ದರೆ ಶಿಕ್ಷಕರ ವೇತನ ಕಡಿತ ಮಾಡಲಾಗುವುದು ಎಂದು ಶಿಕ್ಷಣ ಇಲಾಖೆ ಹೊರಡಿಸಿರುವ ಸುತ್ತೋಲೆ ರಾಜ್ಯ ಸರ್ಕಾರದ ಅನುದಾನಿತ ಶಿಕ್ಷಕರ ವಿರೋಧಿ ನೀತಿಯಾಗಿದೆ. ಕೂಡಲೇ ಈ ಶಿಕ್ಷಕ ವಿರೋಧಿ ನೀತಿ ಸುತ್ತೋಲೆ ವಾಪಸ್ ಪಡೆಯಬೇಕೆಂದು ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಸರ್ಕಾರಕ್ಕೆ ಆಗ್ರಹಿಸಿದೆ. ಅನುದಾನಿತ ಶಾಲೆಗಳಲ್ಲಿ ಸಿಸಿ ಟಿವಿ ಕ್ಯಾಮರಾ ಅಳವಡಿಸುವುದು ಆಡಳಿತ ಮಂಡಳಿಯ ಕರ್ತವ್ಯವಾಗಿದೆ. ಹೀಗಿರುವಾಗ ಶಿಕ್ಷರ ವೇತನಕ್ಕೂ ಸಿಸಿ ಟಿವಿ ಕ್ಯಾಮರಾ ಅಳವಡಿಸುವುದಕ್ಕೂ ಶಿಕ್ಷಣ ಇಲಾಖೆ ತಾಳೆ ಹಾಕುವುದು ಸರಿಯಾದ ನಿರ್ಧಾರವಲ್ಲ. ಈಗಾಗಲೇ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಮಾರಕವಾಗಿರುವ ಕರ್ನಾಟಕ ಶಿಕ್ಷಣ (ತಿದ್ದುಪಡಿ) ಕಾಯ್ದೆ 2014ನ್ನು ಬೆಳಗಾವಿ ಅಧಿವೇಶನದಲ್ಲಿ ವಿಧೇಯಕಕ್ಕೆ ಒಪ್ಪಿಗೆಯನ್ನು ನೀಡುವುದರ ಮೂಲಕ ಖಾಸಗಿ ಅನುದಾನಿತ ಶಿಕ್ಷಕರ ಜೀವನದ ಜೊತೆ ಸರ್ಕಾರ ಚೆಲ್ಲಾಟವಾಡುತ್ತಿದೆ. ಈಗ ಸಿಸಿ ಟಿವಿ ಅಳವಡಿಸದಿದ್ದರೆ ಶಿಕ್ಷಕರ ಸಂಬಳಕ್ಕೆ ಕೈ ಹಾಕುವುದರ ಮೂಲಕ ಅವರನ್ನು ಚಿಂತೆಗೀಡು ಮಾಡಿದೆ. ಸರ್ಕಾರವೇ ನಿಂತು ಸರ್ಕಾರಿ ನೌಕರರ ಹಾಗೂ ಅನುದಾನಿತ ನೌಕರರ ಜೊತೆ ಭೇದ ಬಾವ ಏರ್ಪಡಿಸುತ್ತಿದೆ. ಇಂತಹ ಗೊಂದಲದ ಆದೇಶಗಳನ್ನು ಮಾಡುವುದರ ಮೂಲಕ ರಾಜ್ಯ ಸರ್ಕಾರ ಇಡೀ ನೌಕರರ ವಿರೋಧಿಯಾಗಿ ವರ್ತಿಸುತ್ತಿದೆ.

ಆದ್ದರಿಂದ ರಾಜ್ಯ ಸರ್ಕಾರ ಈ ರೀತಿಯಾದ ಅನುದಾನಿತ ನೌಕರರ ವಿರೋಧಿ ನೀತಿಯನ್ನು ಬಿಟ್ಟು ಅವರನ್ನು ಸಹ ಸಮಾನ ರೀತಿಯಾಗಿ ಕಂಡು ಈ ಎಲ್ಲ ಯೋಜನೆಗಳನ್ನು ಸರ್ಕಾರಿ ನೌಕರರ ಹಾಗೆ, ಅನುದಾನಿತ ನೌಕರರಿಗೂ ವಿಸ್ತರಿಸಬೇಕೆಂದು ಸಂಘದ ಜಿಲ್ಲಾ ಸಂಚಾಲಕ ಈರನಗೌಡ ಕೆ. ಪಾಟೀಲ್ ಆಗ್ರಹಿಸಿದರು.

**ಪತ್ರಿಕಾ ವರದಿ : ಕಲಬುರಗಿ**

## ವಿದ್ಯಾರ್ಥಿ ಮಿತ್ರ – 15 ರ ಉತ್ತರ

### 1. ಈ ಪತ್ರಿಕೆಗಳು ಯಾವ ಭಾಷೆಯಲ್ಲಿ ಪ್ರಕಟವಾಗುತ್ತವೆ ಹೇಳಬಲ್ಲಿರಾ ?

**1. ಬಂಗಾಲಿ ; 2. ಉರ್ದು ; 3. ಒರಿಯಾ ; 4. ಹಿಂದಿ ; 5. ಮರಾಠಿ**

**6. ಇಂಗ್ಲಿಷ್ ; 7. ಬಂಗಾಲಿ ; 8. ಹಿಂದಿ ; 9. ಇಂಗ್ಲಿಷ್ ; 10. ಹಿಂದಿ**

### 2. ಈ ಬಿರುದುಗಳನ್ನು ಪಡೆದಿರುವ ಸ್ಥಳಗಳ ಹೆಸರುಗಳನ್ನು ಹೇಳಬಲ್ಲಿರಾ ?

**1. ಕಾಶ್ಮೀರ ; 2. ಮುಂಬೈ ; 3. ಜೈಪುರ ; 4. ಡಿಸ್ನಿ ಲ್ಯಾಂಡ್ ; 5. ಪಂಜಾಬ್**

**6. ಜಪಾನ್ ; 7. ಶ್ರೀಲಂಕಾ ; 8. ವೆನಿಸ್ ; 9. ಮ್ಯಾನ್ ಮಾರ್ ; 10. ನ್ಯೂಯಾರ್ಕ್**

### 3. ಭಾರತದ ಈ ವಿಜ್ಞಾನಿಗಳನ್ನು ಗುರುತಿಸಬಲ್ಲಿರಾ ?

**1. ಪಿ.ಸಿ. ರಾಯ್ ; 2. ರಾಜಾ ರಾಮಣ್ಣ ; 3. ಎಸ್. ರಾಮನುಜಂ ; 4. ಮೇಘನಾದ ಸಹಾ**

➢ ಪುಟ 9 ರಿಂದ..... ಸ್ಫೂರ್ತಿಯ ಸೆಲೆ

ಆಳ್ವಿಕೆಯನ್ನು ಕೊನೆಗೊಳಿಸುವೆನೆಂದು ನಿರ್ಧರಿಸಿದ ಬಾಲ್ಯದ ಸಂಕಲ್ಪ ಈಡೇರುವವರೆಗೂ ಬಿಡಲಿಲ್ಲ.

ಮೊದಲನೆಯ ಮಹಾಯುದ್ದದಲ್ಲಿ ಫ್ರಾನ್ಸಿನ ಮೇಲೆ ಆಕ್ರಮಣವಾದಾಗ ಪರಮಪ್ರಿಯ ವೈಜ್ಞಾನಿಕ ಸಂಶೋಧನೆ ಬದಿಗೊತ್ತಿ ಗಾಯಾಳುಗಳ ಆಕ್ರಂದನಕ್ಕೆ ಓಗೊಟ್ಟು ಪ್ರಾಯೋಗ ಶಾಲೆಯಿಂದ ರಣರಂಗಕ್ಕೆ ಧುಮುಕಿದರು. 'ದೇಶಪ್ರೇಮಿಗಳ ಸಂಘದ ಮೂಲಕ ನೋವಿನಿಂದ ಬಳಲುತ್ತಿರುವ ಗಾಯಾಳುಗಳಿಗೆ ಶುಶ್ರೂಷೆ ಮಾಡಿದರು. ಕ್ಷ–ಕಿರಣದ ಬಗ್ಗೆ ಮಾಹಿತಿ ಸಂಗ್ರಹಿಸಿ ಫ್ರಾನ್ಸಿನ ಹೆಚ್ಚಿನ ಆಸ್ಪತ್ರೆಗಳಿಗೆ ಕ್ಷ– ಕಿರಣ ಸಾಧನ ಜೋಡಿಸಿಬಿಟ್ಟರು. ದಾನಿಗಳಿಂದ ಹಣ ಸಂಗ್ರಹಿಸಿ ಕ್ಷ–ಕಿರಣಯಂತ್ರಗಳನ್ನು ಅಳವಡಿಸಿದ ಕಾರು ಸಿದ್ಧಪಡಿಸಿದರು. ಒಂದು ಕೋಟಿಗೂ ಹೆಚ್ಚಿನ ಸೈನಿಕರಿಗೆ ಈ ಕಾರುಗಳ ಮೂಲಕ ಸೇವೆಗೈದರು. 'ನೋವು–ರೋಗ' ಎಂಬ ಶತ್ರುಗಳ ವಿರುದ್ಧ ಹೋರಾಡಲು ಬಂದ ವಿಚಿತ್ರ 'ಯೋಧೆ' ಯಾದರು ಮೇಡಂ ಕ್ಯೂರಿ. ಪಡೆದ ಜ್ಞಾನವನ್ನು ಸಾಮಾಜಿಕ ಅಭ್ಯುದಯಕ್ಕಾಗಿ ಬಳಸುವ ಸಾಮಾಜಿಕ ಬದ್ಧತೆ ಪಡೆದ ಉನ್ನತ ಸಾಕ್ಷಾತ್ಕಾರವನ್ನು ಮೇಡಂ ಕ್ಯೂರಿಯಲ್ಲಿ ಕಾಣಬಹುದು.

ಮೇರಿ ಹೊರಗಿನ ಪುರುಷ ಪ್ರಧಾನ ಸಮಾಜದ ಇತಿಮಿತಿಗಳನ್ನೂ ಅಂಥ ಸಮಾಜ ಮಹಿಳೆಯ ಮನಸ್ಸಿನಲ್ಲಿಯೇ ಹುಟ್ಟಿಸುವ ದೋಷಗಳನ್ನು ಗೆದ್ದ ಮಹಿಳೆ ಮೇರಿ ವಿಜ್ಞಾನಿ ಮಾತ್ರವಲ್ಲ ಒಬ್ಬ ಮಾದರಿ ಮಹಿಳೆಯಾಗಿ ನಮ್ಮ ಮನಸ್ಸಿನಲ್ಲಿ ಉಳಿದಿದ್ದಾರೆ.

### ಆಮಿಷಗಳನ್ನು ಮೀರಿದ ನಿರ್ಲಿಪ್ತ ಚೇತನ

ರೇಡಿಯಂ ಕಂಡು ಹಿಡಿದಾಗ ಅದರ ಮಾರುಕಟ್ಟೆಯ ಮೌಲ್ಯ 1 ಗ್ರಾಂ ರೇಡಿಯಂ ಗೆ 7 ಲಕ್ಷ 50 ಸಾವಿರ ಫ್ರಾಂಕುಗಳು. ರೇಡಿಯಂ ಪೇಟೆಂಟ್ ಹಕ್ಕು ತಮ್ಮದಾಗಿಸಿಕೊಳ್ಳಲಿಲ್ಲ. ಹಣದ ಬೆಲೆ ಆಕಸ್ಮಿಕ. ಲಾಭ ಪಡೆಯದೆ ಸಮಾಜದ ಹಿತಕ್ಕೆ ಉಪಯೋಗವಾಗಲು ಅವಕಾಶ ಮಾಡಿಕೊಟ್ಟರು. ವಿಜ್ಞಾನಿಗಳಿಗೆ ಮಹೋನ್ನತ ಆದರ್ಶ ಇದೇ ಈಕೆ ನಿಜವಾಗಿ ಬದುಕಿದ ರೀತಿ.

ನೊಬೆಲ್ ಬಹುಮಾನದ ಹಣ ಕ್ಷಯರೋಗ ಚಿಕಿತ್ಸಾಕೇಂದ್ರಕ್ಕೆ ನೀಡಿದ ದಾನಿ.

1911 ರಲ್ಲಿ 2ನೇ ನೊಬೆಲ್ ಬಹುಮಾನ . ಬಹುಮಾನದ ಹಣ ಮತ್ತು ಸ್ವಂತ ಚಿನ್ನವನ್ನು 'ಯುದ್ಧನಿಧಿ' ಗೆ ಕೊಟ್ಟರು.

ರೇಡಿಯಂನ ತಾಯಿ ಮೇಡಮ್ ಕ್ಯೂರಿ. ಒಂದು ಗ್ರಾಂ ರೇಡಿಯಂಗೆ ಪರದಾಡಿದಾಗ ಅಮೆರಿಕಾದ ಪತ್ರಕರ್ತೆ ಶ್ರೀಮತಿ ಮೇಲೋನಿ ಮೇರಿ ಸಂಶೋಧನೆಗೆ ಸಹಕರಿಸಲು ಪಣತೊಟ್ಟು ಮೇಡಂ ಕ್ಯೂರಿ ರೇಡಿಯಂ ಫಂಡ್ ಮಾಡಿ ಅಪಾರ ಹಣಮಾಡಿ ಮೇರಿಕ್ಯೂರಿಗೆ ಕಾಣಿಕೆ ನೀಡಿದರು. ಈ ಅಪಾರ ಕೊಡುಗೆಯನ್ನು ಮಕ್ಕಳಿಗೆ ಕೊಡದೆ ಸಂಶೋಧನಾ ಸಂಸ್ಥೆಗೆ ನೀಡಿ ತಮ್ಮ ಸಾಮಾಜಿಕ ಬದ್ಧತೆಯನ್ನು ಮೆರೆದರು. ●

➢ ಪುಟ 10 ರಿಂದ..... ಏ ಮೇರೆ ವತನ್ ಕೇ ಲೋಗೋ

ಈ ಸಮಯದಲ್ಲೇ ಅವನ ಬಲಗೈ ಬಂಟ, ರಾಮೋಶಿ ತಂಡದ ಡಾಲತ್ ರಾಲ್ ನಾಯಕ್ 1879 ರ ಮೇ ನಲ್ಲಿ ಮೇಜರ್ ಡೇನಿಯಲ್‌ನ ಗುಂಡೇಟಿಗೆ ಬಲಿಯಾದ. ಫಡಕೆ ತಲೆಗೆ ಬ್ರಿಟಿಷ್ ಸರಕಾರ ಸಾವಿರಾರು ರೂಗಳ ಬಹುಮಾನ ಘೋಷಿಸಿತು. ಡೇನಿಯಲ್ 1800 ಬ್ರಿಟಿಷ್ ಸೈನಿಕರೊಂದಿಗೆ ಫಡಕೆಯನ್ನು ಹಿಡಿಯಲು ಹೊರಟ. ತನ್ನ ತಲೆಗೆ ಬಹುಮಾನದ ಸುದ್ಧಿ ತಿಳಿದ ಫಡಕೆ, ಬಾಂಬೆ ಪ್ರಾಂತದ ಗೌರ್ನರ್ ತಲೆತಂದವರಿಗೆ ಅದಕ್ಕಿಂತ ಹೆಚ್ಚು ಹಣ ಕೊಡುವುದಾಗಿ ಡಂಗೂರ ಸಾರಿದ.

ಮೇಜರ್ ಹೆನ್ರಿ ವಿಲಿಯಂ ಡೇನಿಯಲ್ ಹಾಗೂ ಹೈದರಾಬಾದ್ ನಿಜಾಮನ ಪೋಲೋಸ್ ಅಧಿಕಾರಿ ಅಬ್ದುಲ್ ಹಕ್ ಫಡಕೆಯ ಹಿಂದೆ ಬಿದ್ದರು. ಬ್ರಿಟಿಷರೊಂದಿಗಿನ ಯುದ್ಧದಲ್ಲಿ ಜತೆಗಾರರೆಲ್ಲಾ ಹುತಾತ್ಮರಾದರು. ಬಹುಮಾನದ ಆಸೆಗೆ ಬಿದ್ದ ದೇಶದ್ರೋಹಿಗಳು ಫಡಕೆಯನ್ನು ಡೇನಿಯಲ್‌ಗೆ ಹಿಡಿದುಕೊಡುವ ಸಂಚು ರೂಪಿಸಿದರು. 1879ರ ಜುಲೈ 20 ರಂದು ಕಲದಗಿ ಜಿಲ್ಲೆಯ ಗ್ರಾಮವೊಂದರ ದೇವಸ್ಥಾನದಲ್ಲಿ ಬಳಲಿಬೆಂಡಾಗಿ ನಿದ್ರಿಸುತ್ತಿದ್ದ ಫಡಕೆಯನ್ನು, ಡೇನಿಯಲ್ ಹಿಡಿಯುವ ಪ್ರಯತ್ನ ಮಾಡಿದ. ಆ ಸ್ಥಿತಿಯಲ್ಲೂ ಫಡಕೆ ಹೋರಾಡಿಯೇ ಸೆರೆಸಿಕ್ಕ.

ಸೆರೆಸಿಕ್ಕ ಫಡಕೆಯ ಪರವಾಗಿ ಸಾರ್ವಜನಿಕ ಕಾಕ ಎಂದೇ ಹೆಸರಾದ ಘನಾದ ಖ್ಯಾತ ವಕೀಲ ಗಣೇಶ ವಾಸುದೇವ ಜೋಷಿಯವರು ನ್ಯಾಯಾಲಯದಲ್ಲಿ ವಾದ ಮಂಡಿಸಿದರು. ಆದರೆ ಪೂರ್ವ ನಿರ್ಧಾರಿತ ತೀರ್ಪಿನಂತೆ ಅವನಿಗೆ ಆಜೀವ ಕಾರಾಗೃಹ ಶಿಕ್ಷೆವಿಧಿಸಿ ದೂರದ ಏಡನ್ ಬಂದರಿನಲ್ಲಿನ ಕಾರಾಗೃಹದಲ್ಲಿಡಲಾಯಿತು. 1883ರ ಫೆಬ್ರವರಿ 13 ರಂದು ಫಡಕೆ ಕಾರಾಗೃಹದಿಂದ ತಪ್ಪಿಸಿಕೊಂಡು ಸಮುದ್ರದತ್ತ ಓಡಿದ ಅದರೆ ಅವನನ್ನು ಬೆನ್ನತ್ತಿದ ಪೋಲೀಸರು ಮತ್ತೆ ಹಿಡಿದು ಸೆರೆಗೆ ದೂಡಿದರು.

ಫಡಕೆ ಆ ಮರಣ ಉಪವಾಸವ್ರತ ಕೈಗೊಂಡ. ಆದರೆ ಫೆಬ್ರವರಿ 17, 1883 ಅಚಾನಕ್‌ಆಗಿ ಬ್ರಿಟಿಷರು ಅವನನ್ನು ಏಡನ್‌ನಲ್ಲಿಯೇ ಗಲ್ಲಿಗೇರಿಸಿದರು.

ಗಲ್ಲಿಗೇರುವ ಮುನ್ನ ವಾಸುದೇವ ಬಲವಂತ ಫಡಕೆ ತಾನು ನಿತ್ಯ ಪೂಜಿಸುತ್ತಿದ್ದ ಒಂದು ಗಂಟನ್ನು ತೆರೆದು ಕೊನೆಯ ಬಾರಿ ವಂದಿಸಿ ಗಲ್ಲಿಗೇರಿದ.

ಆ ಗಂಟಿನಲ್ಲಿದ್ದ ದೇವತೆ ಯಾರು ಗೊತ್ತೇ? ಅವನನ್ನು ಭಾರತದಿಂದ ಏಡನ್‌ಗೆ ಕರೆದೊಯ್ದಾಗ ತನ್ನ ತಾಯ್ನಾಡಿನಿಂದ ತೆಗೆದುಕೊಂಡು ಹೋಗಿದ್ದ 'ಹಿಡಿಮಣ್ಣು'. ! ●

# ಸಾಧಕರನ್ನು ಸ್ಮರಿಸೋಣ

## ಶ್ರೀ ರಾಮಕೃಷ್ಣ ಪರಮಹಂಸರು (18.02.1836)

ಚಿರಾಯುವಾದ ಭಾರತ ಮಾತೆಯ ಶ್ರೇಷ್ಠತಮ ಪುತ್ರರಲ್ಲಿ ಶ್ರೀ ರಾಮಕೃಷ್ಣ ಪರಮಹಂಸರೂ ಒಬ್ಬರು. ಶ್ರೀ ರಾಮಕೃಷ್ಣರ ಜೀವನ ವೇದವೇದಾಂತಗಳಿಂದ ಬರೆದಿರುವ ಸಚೇತನ ಭಾಷ್ಯದಂತಿದೆ. ಇವರ ಜೀವನ ದ್ವೈತ, ಅದ್ವೈತ, ವಿಶಿಷ್ಟಾದ್ವೈತಗಳ ತ್ರಿವೇಣಿ. ಭಗವಂತನನ್ನು ಜ್ಞಾನ, ಭಕ್ತಿ, ಯೋಗ, ಮುಂತಾದ ಭಾವಗಳಲ್ಲಿ ಸದಾ ಮುಗುಳ್ನಗೆ ಚಿಮ್ಮುತ್ತಿರುತ್ತದೆ. ಆಂತರ್ಯದಲ್ಲಿ ರೋಮಾಂಚನಕಾರಿಯಾಗಿ ಆಧ್ಯಾತ್ಮಿಕ ಘಟನಾವಳಿಗಳು ತುಂಬಿ ತುಳುಕುತ್ತವೆ. ಇವರು ಘನ ವಿದ್ವಾಂಸರ ಗುಂಪಿಗೆ ಸೇರಿದವರಲ್ಲ. ದೊಡ್ಡ ವಾಗ್ಮಿಗಳಲ್ಲ. ಉಪನ್ಯಾಸ ನೀಡಲು ಹೊರಗೆ ಎಲ್ಲೂ ಹೋದವರಲ್ಲ. ಆದರೆ ಸಹಸ್ರ ಸಹಸ್ರ ಮಂದಿ ಇವರಿಂದ ಪ್ರೇರಣೆ ಪಡೆದಿದ್ದಾರೆ. ಅವರ ಸರಳವಾದ ಉದಾಹರಣೆಗಳು, ಘಟನೆಗಳನ್ನು ಕೇಳಿ ಪುಳಕಿತರಾಗಿದ್ದಾರೆ. ತಮ್ಮ ಜೀವನದ ಬಹುಪಾಲನ್ನು ದಕ್ಷಿಣೇಶ್ವರ ದೇವಾಲಯದಲ್ಲೇ ಕಳೆದರು. ಆದರೂ ಅಪರೂಪವಾಗಿ ಅರಳಿದ ಸಹಸ್ರ ದಳ ಕಮಲದಂತೆ ಅರಳಿದರು. ನೊಂದ ಜೀವಿಗಳಿಗೆ ಸಾಂತ್ವನದ ಧರ್ಮಾಮೃತವನ್ನು ಧಾರೆಯೆರೆದರು. ಇಂಥ ಸಮರ್ಥ ಗುರುವಿಗೆ ನರೇಂದ್ರನಂಥ ಸಮರ್ಥ ಶಿಷ್ಯನೇ ದೊರೆತನು. ಮುಂದೆ ಸ್ವಾಮಿವಿವೇಕಾನಂದರಾಗಿ ಇಡೀ ವಿಶ್ವಕ್ಕೆ ಭಾರತದ ಘನತೆ– ಗೌರವಗಳನ್ನು ಸಾರಲು ಪ್ರೇರಣೆಯನ್ನು ನೀಡಿದರು.

## ಪಂಜೆ ಮಂಗೇಶರಾವ್ (ಕವಿಶಿಷ್ಯ) (22.02.1874)

ಕನ್ನಡ ಸಾಹಿತ್ಯದಲ್ಲಿ ನವೋದಯ ಕಾವ್ಯದ ಪ್ರವರ್ತಕರೆಂದು ಪಂಜೆ ಮಂಗೇಶರಾಯರು ಪ್ರಖ್ಯಾತರಾಗಿದ್ದಾರೆ. 'ನಾಗರಹಾವೆ ಹಾವೊಳು ಹೂವೆ, ಬಾಗಿಲ ಬಿಲದೊಳು ನಿನ್ನಯ ಠಾವೆ' ಎಂಬ ಶಿಶುಗೀತೆ ಕನ್ನಡನಾಡಿನ ಎಲ್ಲರ ನಾಲಿಗೆಯ ಮೇಲೆ ನಲಿದಾಡುತ್ತಿದೆ. ಅವರ ಅನೇಕ ಗೀತೆಗಳು ಪಠ್ಯ ಪುಸ್ತಕಗಳಲ್ಲಿ ಸೇರಿವೆ. ಪಂಚಕಜ್ಜಾಯ, ಹುತ್ತರಿ ಹಾಡು, ತೆಂಕಣ ಗಾಳಿಯಾಟ, ಐತಿಹಾಸಿಕ ಕಥಾವಳಿ, ಕೋಟಿಚನ್ನಯ್ಯ ಇಲಿಗಳ ಥ ಕಥೈ, ಅಜ್ಜಿಸಾಕಿದ ಮಗು ಮುಂತಾದ ಕೃತಿಗಳ ಮೂಲಕ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ.

## ಅ.ರಾ.ಮಿತ್ರ (25.02.1935)

ಕನ್ನಡ ನಾಡಿನ ಹೆಸರಾಂತ ವಿದ್ವಾಂಸರಲ್ಲಿ ಅ.ರಾ ಮಿತ್ರ ಅವರು ಪ್ರಮುಖರಾಗಿದ್ದಾರೆ. ಕೈಲಾಸಂ, ಮಲ್ಯ, ಚಂದ್ರಗುಪ್ತಮೌರ್ಯ, ಬಾಲ್ಕನಿಯ ಬಂಧುಗಳು, ಮಿತ್ರ ಪ್ರಬಂಧ, ಸಂಕಲ್ಪಗಳು, ಯಾರೋ ಬಂದಿದ್ದರು ಮುಂತಾದ ಕೃತಿಗಳನ್ನು ರಚಿಸಿದ್ದಾರೆ. ಒಳನೋಟಗಳು, ವಚನಕಾರರು, ಶಬ್ದಕಲ್ಪ, ಶಿಕ್ಷಣ ಚಿಂತನೆ, ಭಾಷಾಶಾಸ್ತ್ರ, ಛಂದೋಮಿತ್ರ, ಸಮಗ್ರ ಲಲಿತ ಪ್ರಬಂಧಗಳು, ಮಹಾಭಾರತ ಕಥಾಮಿತ್ರ ಕೃತಿಗಳನ್ನು ರಚಿಸಿ ಕನ್ನಡಿಗರ ಜ್ಞಾನದಾಹವನ್ನು ತಣಿಸುತ್ತಿದ್ದಾರೆ.

## ಎಸ್. ವಿ. ಪರಮೇಶ್ವರ ಭಟ್ಟ (18.02.1914)

ಶ್ರೇಷ್ಠ ವಾಗ್ಮಿಗಳೂ, ಭಾಷಾಂತರಕಾರರೂ ಆಗಿರುವ ಎಸ್.ವಿ ಪರಮೇಶ್ವರ ಭಟ್ಟರು, ಕಾಳಿದಾಸನ ಎಲ್ಲ ಗ್ರಂಥಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ರಾಗಿಣಿ, ಇಂದ್ರಚಾಪ, ತುಂಬೆಹೂ, ಉಪ್ಪುಗಡಲು, ಪಾಮರ ಮುಂತಾದ ಕೃತಿಗಳನ್ನು ರಚಿಸಿದ್ದಾರೆ.

## ಮುಳಿಯ ತಿಮ್ಮಪ್ಪಯ್ಯ (03.03.1888)

ಪ್ರಮುಖ ಸಂಶೋಧಕರಾಗಿ, ವಿಮರ್ಶಕರಾಗಿ ಪತ್ರಕರ್ತರಾಗಿ, ಶಿಕ್ಷಕರಾಗಿ ಮುಳಿಯ ತಿಮ್ಮಪ್ಪಯ್ಯ ಅವರು ಕಾರ್ಯನಿರ್ವಹಿಸಿದ್ದಾರೆ. ಚಂದ್ರಾವಳಿಯ ವಿಲಾಸ, ಬಡಹುಡುಗಿ, ಪ್ರೇಮಪಾಶ, ಶಂಬರಾಸುರ, ಕಾವ್ಯ ಸಮಯ, ತ್ರಿಪುರದಾಹ ಮುಂತಾದ ಕೃತಿಗಳನ್ನು ರಚಿಸಿದ್ದಾರೆ.

## ಡಿ.ವಿ.ಜಿ. (17.03.1887)

ಕನ್ನಡ ಸಾಹಿತ್ಯ ಲೋಕದ 'ಭೀಷ್ಮ' ಎಂದು ಜನಪ್ರಿಯರಾಗಿರುವ ಡಿವಿಜಿ ಯವರನ್ನು ತಮ್ಮ ಕಾವ್ಯಗಳಲ್ಲಿ ಆಧ್ಯಾತ್ಮಿಕ ಜ್ಞಾನ ನಿಧಿಯನ್ನು ತುಂಬಿದ್ದಾರೆ. ಗೋಖಲೆ ಸಾರ್ವಜನಿಕ ಸಂಸ್ಥೆಯನ್ನು ಸ್ಥಾಪಿಸಿದ್ದರು. ಮಂಕುತಿಮ್ಮನ ಕಗ್ಗ. ಮರುಳು ಮುನಿಯನ ಕಗ್ಗ, ಬಾಳಿಗೊಂದು ನಂಬಿಕೆ, ಅಂತಃಪುರಗೀತೆ, ಜೀವನ ಧರ್ಮಯೋಗ, ಮುಂತಾದ ಮೌಲ್ಯಯುತ ಕೃತಿಗಳನ್ನು ರಚಿಸಿ ನಾಡಿನಾದ್ಯಂತ ಮನೆಮಾತಾಗಿದ್ದಾರೆ ಡಿವಿಜಿಯವರು.

ಪತ್ರಕರ್ತರಾಗಿ, ಸಾಮಾಜಿಕ ಕಾರ್ಯಕರ್ತರಾಗಿ, ಲೇಖಕರಾಗಿ ಋಷಿಕಲ್ಪ ಸಾಧಕರೆನಿಸಿದ್ದಾರೆ. ರಾಷ್ಟ್ರೀಯ ಸವಾಲುಗಳಿದ್ದಾಗ ಹೋರಾಟಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದಾರೆ. 'ಸಂಸ್ಕೃತಿ ಎಂದರೆ ಮಾಧುರ್ಯ ಮತ್ತು ಪ್ರಕಾಶದ ಬಗೆಗೆ ಆವೇಶಗೊಂಡಿರುವುದು ಎಂಬ ದರ್ಶನದ ಪ್ರತ್ಯಕ್ಷೀಕರಣವೇ ಡಿವಿಜಿ ಯವರ ಬದುಕಾಗಿದೆ.

**ವಿ. ರಾಜ**
**ಕರ್ನಾಟಕ ರಾಜ್ಯ**
**ಮಾಧ್ಯಮಿಕ ಶಿಕ್ಷಕ ಸಂಘ**
**ಬೆಂಗಳೂರು ದಕ್ಷಿಣ ಜಿಲ್ಲೆ ಅಧ್ಯಕ್ಷರು**



# ಚಿತ್ರ ಸುದ್ದಿ



ಸಂಕಲ್ಪ ದಿನಾಚರಣೆ – ಬೆಂಗಳೂರು ಉತ್ತರ



ಸಂಕಲ್ಪ ದಿನಾಚರಣೆ – ಕೊಪ್ಪಳ



ಸಂಕಲ್ಪ ದಿನಾಚರಣೆ – ಕಲ್ಬುರ್ಗಿ

**FEBRUARY 2015**
Date of Posting
20th or 21st of every month

Registered No. RNI 45459/85
RNP/KA/BGS-125/2015-2017
Posted at Bangalore GPO
Bangalore -560 001

## ಶಿಕ್ಷಕ ಸಮಾಚಾರ ತರಿಸಲು ಇಲಾಖೆಯ ಆದೇಶ

D.P.I. (Special) ಅವರ ಆದೇಶ ಸಂಖ್ಯೆ T3-LBS-RKM-7/79-80 ದಿನಾಂಕ 20-6-1980 ರ ಪ್ರಕಾರ ರಾಜ್ಯದ ಎಲ್ಲಾ ಪ್ರಾಥಮಿಕ ಶಾಲೆಗಳು, ಹೈಸ್ಕೂಲುಗಳು, ಜ್ಯೂನಿಯರ್ ಕಾಲೇಜುಗಳು ಮತ್ತು ಶಿಕ್ಷಕರ ತರಬೇತಿ ಸಂಸ್ಥೆಗಳು (T.T.I.) ತಮ್ಮ ವಾಚನಾಲಯ ಅಥವಾ ಪುಸ್ತಕಾಲಯ ನಿಧಿಯಿಂದ ''ಅಖಿಲ ಕರ್ನಾಟಕ ಶಿಕ್ಷಕ ಸಮಾಚಾರ'' ಚಂದಾ ಪಾವತಿ ಮಾಡಬಹುದು.

IF UNDELIVERED PLEASE RETURN TO SENDER

Published for K.S.S.T.A. by K. Narahari
# 55, Yadavasmruthi, 1st Main, Sheshadripuram,
Bangalore - 560 020. ✆ : 080-23466495
Printed at : RASHTROTTHANA MUDRANALAYA, Bangalore - 560 019.

srushtidesigns@gmail.com